ಜನಪದ ವಿಚಾರ

ಸಂಪುಟ ೧೮
ಮೇ ೨೦೧೮
ಸಂಚಿಕೆ ೧೦

ರಾಜ್ಯ ಬಂದರೇನು, ರಾಜ್ಯ ಹೋದರೇನು ? ಎಲ್ಲ ಒಂದೆ.
ಪರಕೀಯರ ದಬ್ಬಾಳಿಕೆ,
ನಮ್ಮವರೆದೆಯುಬ್ಬಾಳಿಕೆ,
ಮಬ್ಬಾಳಿಕೆ, ಗಬ್ಬಾಳಿಕೆ-
ಎಲ್ಲ ಒಂದೆ ಒಂದೆ !

– ಗೋಪಾಲಕೃಷ್ಣ ಅಡಿಗ

ಈ ಸಂಚಿಕೆಯಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಪತ್ರಿಕೆ

ಮೇ - ೨೦೧೮
ಸಂಪುಟ - ೧೯
ಸಂಚಿಕೆ -೧೦

ಸಂಪಾದಕರು

ಸಂತೋಷ್ ಕೌಲಗಿ

ಚಂದಾ ವಿವರ

ವಾರ್ಷಿಕ : ರೂ ೨೦೦/-

ಸಂಪರ್ಕವಿಳಾಸ

ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ - ೫೭೧೪೩೧
ಮಂಡ್ಯ ಜಿಲ್ಲೆ

ದೂರವಾಣಿ

೦೨೩೬ ೨೯೮೫೪

೭೮೨೯೪೮೯೧೪೭

Email : janapada@yahoo.com
web : janapada.org

ತಿಂಗಳ ಕವನ

ಪ್ರಸ್ತುತ

ಅಯ್ಯೊ ನನ್ನ ದೇಶವೇ
ಏನಾಗಿದೆ ನಿನಗೆ?
ಯಾಕೆ ಹೀಗೆ ಹೊಯ್ದಾಡುವೆ
ಅಸ್ವಸ್ಥತೆಯೊಳಗೆ?
ದೀಪದಂಥ ಕಣ್ಣ ತುಂಬ
ಬೆಂಕಿಯುರಿವುದೇತಕೆ?
ಹಾಲಾಹಲ ತುಂಬಿತೇಕೆ
ಹಾಲಿನಂಥ ಹೃದಯಕೆ?
ಪಾಚಿಗಟ್ಟಿ ನಾರುತಿರುವು-
ದೇಕೆ ನಿನ್ನ ನದಿಗಳು?
ಹಸುರಿಲ್ಲದೆ ಬರಡಾಗಿವೆ
ವನ-ಪರ್ವತ ನೆಲೆಗಳು.
ತೊಂಡುಗೂಳಿ ತುಳಿಯುತಲಿವೆ
ಬೆಳೆದ ಹೊಲದ ಹಸುರನು
ಇಲಿ-ಹೆಗ್ಗಣ ಮುಕ್ಕುತಲಿವೆ
ಹಳೆ ಪಣತದ ಕಾಳನು.
ಬೆಂಕಿ-ನೆತ್ತರಾಟದಲ್ಲಿ
ತಾಮಸಗಳ ಆರ್ಭಟ.
ಹರಿದು ಚಿಂದಿಯಾಗುತಲಿದೆ
ನಮ್ಮ ನಾಡ ಬಾವುಟ.

-ಜಿ.ಎಸ್. ಶಿವರುದ್ರಪ್ಪ

(ಈ ಪದ್ಯದ ಟಿಪ್ಪಣಿ ಪುಟ ೩೨ ರಲ್ಲಿ)

ನಿಮ್ಮೊಂದಿಗೆ

ಮೇ ಮಾಹೆಯ 'ಜನಪದ ವಿಚಾರ' ವನ್ನು ನಿಮ್ಮ ಕೈಯಲ್ಲಿ ಇಡುತ್ತಿದ್ದೇವೆ. ಎಲ್ಲ ಕಡೆಯೂ ಬೇಸಿಗೆ ಬಿಸಿಲು ತನ್ನ ಅಗಾಧ ಶಕ್ತಿಯನ್ನು ಪ್ರದರ್ಶಿಸುತ್ತಿದೆ.

ಡಾಂಬರು ರಸ್ತೆಗಳು ಮತ್ತು ಕಟ್ಟಡಗಳು ಈ ಝಳವನ್ನು ಪ್ರತಿಫಲಿಸಿ ಶಾಖ ಮತ್ತಷ್ಟು ಹೆಚ್ಚುವಂತೆ ಮಾಡುತ್ತಿವೆ. ಅಲ್ಲೊಂದು ಇಲ್ಲೊಂದು ಇರುವ ಹೊಂಗೆ ಮರದ ನೆರಳಿಗೆ ಹೋದಾಗ ತಂಪು ಆವರಿಸಿ ಇಲ್ಲೇ ಇದ್ದು ಬಿಡೋಣ ಎನಿಸುತ್ತದೆ. ನಮ್ಮ ತಂತ್ರಜ್ಞಾನ ನೀಡಿರುವ ಫ್ಯಾನ್ ಮತ್ತು ಎಸಿ ಯ ತಂಪು ಹೊಂಗೆ ಮರದ ತಂಪಿನ ಮುಂದೆ ಏನೇನೂ ಇಲ್ಲ ಅನಿಸುತ್ತದೆ.

ತಂಪು ಪಾನೀಯಗಳನ್ನು ಕುಡಿದು ಕುಡಿದು ಬಾಯಾರದ ಜನ ಎಳನೀರನ್ನೂ, ಕಲ್ಲಂಗಡಿ ಹಣ್ಣನ್ನು ಹುಡುಕಿ ಬರುತ್ತಾರೆ. ಅದಕ್ಕಿಂತ ಇದೇ ವಾಸಿ ಎನ್ನುತ್ತಾರೆ. ಎ.ಸಿ ಹಾಕಿದ ಕಾರಿನಲ್ಲಿ ಪ್ರಯಾಣಿಸುತ್ತಿರುವ ಮಂದಿ ಸ್ವಲ್ಪ ಸಮಯದ ನಂತರ ಎ.ಸಿ ನಿಲ್ಲಿಸಿ, ಕಾರಿನ ಕಿಟಕಿಯ ಗಾಜನ್ನು ಇಳಿಸಿ ಅದಕ್ಕಿಂತ ಇದೇ ವಾಸಿ ಎನ್ನುತ್ತಾರೆ.

ಸುಡು ಬೇಸಿಗೆಯಲ್ಲಿ ಸುಮಾರು ನೂರು ವರ್ಷದ ಹಿಂದಿನ ನಮ್ಮ 'ಜನಪದ ನಿಲಯ' ದ ಒಳಗೆ ಬಂದು ಕೂರುವ ಮಂದಿ ಫ್ಯಾನ್ ಇಲ್ಲದ, ಮಣ್ಣಿನ ಗೋಡೆಯ ಈ ಮನೆಯ ತಂಪನ್ನು ಅನುಭವಿಸಿ ಅದಕ್ಕಿಂತ ಇದೆ ವಾಸಿ ಎನ್ನುತ್ತಾರೆ.

ಹಾಗೆಯೇ ಕಡು ಬೇಸಿಗೆಯಲ್ಲಿ ಕೃತಕ ನೂಲಿನಿಂದ ತಯಾರಿಸಿದ ಅರಿವೆ ತೊಟ್ಟು ನಮ್ಮಲ್ಲಿಗೆ ಬರುವ ಜನರು ನಮ್ಮ ಖಾದಿ ತೊಟ್ಟು ಅದಕ್ಕಿಂತ ಇದೇ ವಾಸಿ ಎನ್ನುತ್ತಾರೆ. ಹೋದ ವರ್ಷ ಒಂದು ಕೊಂಡಿದ್ದೆ ಯಾಕೋ ಇನ್ನು ಮುಂದೆ ಈ ಬಟ್ಟೆಯನ್ನೇ ತೊಡಬೇಕು ಎನಿಸುತ್ತಿದೆ ಎನ್ನುತ್ತಾರೆ.

ಇದನ್ನೆಲ್ಲ ನೋಡಿದಾಗ ಮನುಷ್ಯನಿಗೆ ಪ್ರಕೃತಿ ನೀಡಿರುವ ಕೊಡುಗೆಗಿಂತಲೂ ಅಮೂಲ್ಯವಾದದ್ದನ್ನು ಮನುಷ್ಯ ಸೃಷ್ಟಿಸಲಾರ ಎನಿಸುತ್ತದೆ. ಸಹಜವಾದದಕ್ಕೆ ಯಾವುದೇ ಪ್ರಚಾರ ಬೇಡ. ಅನಿವಾರ್ಯವಾಗಿ ಜನ ಅದರ ಬಳಿ ಬರುತ್ತಾರೆ. ಅಲ್ಲಿಯವರಗೆ ತನ್ನ ಸಹಜತೆಯನ್ನು ಅದು ಕಾಯ್ದು ಕೊಳ್ಳಬೇಕಷ್ಟೆ.

ಈ ಮಾಹೆಯ ಜನಪದ ವಿಚಾರ ರೂಪುಗೊಳ್ಳಲು ಸಹಕರಿಸಿದ ಎಲ್ಲರಿಗೂ ವಂದನೆಗಳು. ನಿಮಗೆ ಈ ಸಂಚಿಕೆ ಇಷ್ಟವಾಗುತ್ತದೆ ಎಂದು ಭಾವಿಸಿದ್ದೇವೆ. ನಿಮ್ಮ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತೇವೆ.

ವಂದನೆಗಳು

ಮತ್ತೆ ಬಂತು ಚುನಾವಣೆ

ಮತ್ತೊಂದು ಚುನಾವಣೆ ಬಂದಿದೆ. ಆದರೆ ಚುನಾವಣೆಯಿಂದ ಚುನಾವಣೆಗೆ ಅದರ ಪಾವಿತ್ರ್ಯ ಕಮ್ಮಿಯಾಗುತ್ತಾ ಹೋಗುತ್ತಿದೆ. ಯಾರನ್ನು ಚುನಾಯಿಸಬೇಕು ಎಂಬುದಕ್ಕೆ ಯಾವುದೇ ಪಂಡಿತರಿಂದಲೂ ಸರಿಯುತ್ತರ ಸಿಗುತ್ತಿಲ್ಲ. ಯೋಗ್ಯ ಅಭ್ಯರ್ಥಿಯನ್ನು ಗೆಲ್ಲಿಸಿ ಎಂದು ಉತ್ತರ ಬರುತ್ತದೆ. ಯಾರು ಯೋಗ್ಯ ಅಭ್ಯರ್ಥಿ? ಎಂದರೆ ಉತ್ತರ ದೊರೆಯುವುದಿಲ್ಲ. ಹಣ ಮತ್ತು ಜಾತಿಯೇ ಚುನಾವಣೆಯಲ್ಲಿ ನಿರ್ಧಾರಕ ಅಂಶಗಳು ಎಂಬುದು ಎಲ್ಲರ ಅನುಭವಕ್ಕೂ ಬಂದಿದೆ. ಹಣ ಮತ್ತು ಜಾತಿಯನ್ನು ಹೊರಗಿಡದ ಚುನಾವಣೆಯಲ್ಲಿ ಆಯ್ಕೆಯಾದ ವ್ಯಕ್ತಿ ನಿಜ ಜನ ಪ್ರತಿನಿಧಿ ಆಗುವುದೇ ಇಲ್ಲ. ಮೊನ್ನೆ ಭೇಟಿಯಾದ ಬಳ್ಳಾರಿಯ ಪತ್ರಕರ್ತರೊಬ್ಬರು ಬಳ್ಳಾರಿಯಲ್ಲಿ ಚುನಾವಣಾ ಅಭ್ಯರ್ಥಿಗಳು ಪ್ರತಿಯೊಬ್ಬರೂ ಕನಿಷ್ಟ ೮೦ ರಿಂದ ೧೦೦ ಕೋಟಿ ಹಣ ಖರ್ಚು ಮಾಡುತ್ತಾರೆಂದು ಹೇಳಿದರು. ೫.೧ ಕೋಟಿ ಮತದಾರಿರುವ ಕರ್ನಾಟಕದಲ್ಲಿ ತಲಾ ಮತದಾರರಿಗೆ ೨೦೦೦ ದಂತೆ ಅಭ್ಯರ್ಥಿಗಳು ಖರ್ಚು ಮಾಡುತ್ತಾರೆ ಎಂದು ಒಂದು ಅಂಕಿ ಅಂಶ ಹೇಳುತ್ತಿದೆ. ಅಂದರೆ ಒಟ್ಟು ೧೦೨೦೦ ಕೋಟಿ ಹಣವನ್ನು ಅಭ್ಯರ್ಥಿಗಳು ವ್ಯಯಿಸುತ್ತಿದ್ದಾರೆಂದಾಯಿತು. ಅಂದರೆ ಒಂದು ವಿಧಾನ ಸಭಾ ಕ್ಷೇತ್ರದಲ್ಲಿ ಸರಾಸರಿ ೪೫ ಕೋಟಿ ಖರ್ಚಾಗುತ್ತಿದೆ. ಇದಲ್ಲದೆ ಸರ್ಕಾರ ಈ ಚುನಾವಣೆ ನಡೆಸಲು ಭರಿಸುವ ಹಣದ ಲೆಕ್ಕ ನನಗೆ ಗೊತ್ತಿಲ್ಲ. ಆಸ್ತಿ ಘೋಷಣೆ ಮಾಡುತ್ತಿರುವ ಅಭ್ಯರ್ಥಿಗಳ ಆಸ್ತಿ ವಿವರ ನೋಡಿ. ಅವೆಲ್ಲವೂ ಕೋಟಿಗಳಲ್ಲಿ ಇದೆ. ಕಳೆದ ಸಲಕ್ಕಿಂತ ಅವರೆಲ್ಲರ ಆಸ್ತಿ ಹಲವಾರು ಪಟ್ಟು ಹೆಚ್ಚಾಗಿದೆ. ಇಷ್ಟೊಂದು ಹಣ ಖರ್ಚು ಮಾಡಿ ವಿಧಾನಸಭೆಯ ಸದಸ್ಯರಾಗಲು ಇವರೆಲ್ಲರೂ ಹಾತೊರೆಯುತ್ತಿರುವುದೇಕೆ ? ಉತ್ತರ ಸ್ಪಷ್ಟ. ಹಣ ಮತ್ತು ಅಧಿಕಾರ. ಇಷ್ಟೊಂದು ಹಣ ವ್ಯಯಿಸಿ ಅಧಿಕಾರಕ್ಕೆ ಬಂದವರು ಅಧಿಕಾರಕ್ಕೆ ಬಂದ ಮೇಲೆ ಸಂಪಾದನೆ ಮಾಡದಿದ್ದರೆ ಅವರಿಗೆ ಉಳಿಗಾಲವಿದೆಯೇ ?

ಚುನಾವಣೆಯ ತಯಾರಿ ಚುನಾವಣೆಗೆ ಎರಡು ವರ್ಷ ಮೊದಲೇ ಒಂದು ರೀತಿಯಲ್ಲಿ ಪ್ರಾರಂಭವಾಗಿರುತ್ತದೆ. ಭಾವಿ ಅಭ್ಯರ್ಥಿಗಳು ಹಳ್ಳಿಯ ವಿವಿಧ ಕಾರ್ಯಕ್ರಮಗಳಿಗೆ ತೆರಳಿ ಹಳ್ಳಿಯ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಹಣ ಕೊಡುವುದು, ಅಪಘಾತ ಆದವರಿಗೆ ಹಣ ಕೊಟ್ಟು ಸಾಂತ್ವನ ಹೇಳುವುದು, ಗಣಪತಿ ಹಬ್ಬದಲ್ಲಿ ಸಂಗೀತ ಕಾರ್ಯಕ್ರಮಕ್ಕೆ ನೆರವು ನೀಡುವುದು, ಕಬಡ್ಡಿ ಆಡಿಸುವುದು, ಆಟೋ ಸಂಘಗಳಿಗೆ ಕನ್ನಡ ರಾಜ್ಯೋತ್ಸವ ಆಚರಿಸಲು ನೆರವಾಗುವುದು, ಹೀಗೆ. ಇತ್ತೀಚಿಗೆ ಮತದಾರರು ತಮ್ಮ ಮನೆಯ ಮದುವೆಗೆ ಭಾವಿ ಅಥವಾ ಹಾಲಿ ಸದಸ್ಯನಿಂದ ಹಣ ಪಡೆದು ಇಂತಹವರ ಕೃಪಾಶೀರ್ವಾದಿಂದ ಈ ಮದುವೆ ನಡೆಯುತ್ತಿದೆ ಎಂದು ಆಮಂತ್ರಣ ಪತ್ರಿಕೆಯಲ್ಲಿ ಯಾವುದೇ ಸಂಕೋಚವಿಲ್ಲದೆ ರಾಜಾರೋಷವಾಗಿ ಅಚ್ಚು ಹಾಕಿಸತೊಡಗಿದ್ದಾರೆ. ಇವರಿಗೆ ಚುನಾವಣೆಯ ಸಂದರ್ಭದಲ್ಲಿ ಆತನಿಗೇ ಮತ ಚಲಾಯಿಸ ಬೇಕಾದ ಹಂಗಿಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ನಾವು ಕೇಳಿದ್ದಕ್ಕೆಲ್ಲಾ ಹಣ ಕೊಡಲು ಇವನಿಗೆ ಎಲ್ಲಿಂದ ಹಣ ಬರುತ್ತದೆ

ಎಂಬ ಪ್ರಶ್ನೆಯನ್ನು ಅವರು ತಮಗೆ ಹಾಕಿಕೊಳ್ಳಲು ಹೋಗುವುದೇ ಇಲ್ಲ. ತಾವು ಪಡೆದ ಹಣ-ಕ್ಕೂ ತಮ್ಮ ಊರಿನ ಕೆಲವೇ ದಿನಗಳಲ್ಲಿ ಗುಂಡಿ ಬೀಳುವುದಕ್ಕೂ ನೇರ ಸಂಬಂಧವಿದೆ ಎಂದು ಅರಿಯುವ ಶಕ್ತಿಯನ್ನೂ ಹೊಂದಿಲ್ಲ.

ಸಾಮಾನ್ಯ ಜನರಿಗೆ ಚುನಾವಣೆ ಬಗ್ಗೆ ಏನು ಅರಿವಿದೆ ಎಂದು ತಿಳಿಯಲು ನಾನು ಕಂಡ ಕಂಡ 'ಶ್ರೀ ಸಾಮಾನ್ಯ' ರನ್ನೆಲ್ಲಾ ಚುನಾವಣೆಯ ಬಗ್ಗೆ ಪ್ರಶ್ನೆ ಕೇಳುತ್ತಿದ್ದೇನೆ. ಹೆಚ್ಚಿನವರು ನನ್ನ ಸುತ್ತಲಿನ ಸಾಮಾನ್ಯ ಹಳ್ಳಿಗರಾಗಿದ್ದಾರೆ. ಮಹಿಳೆಯರು ಪುರುಷರು ಇದ್ದಾರೆ. ಹೆಚ್ಚಿನವರು ಒಂದಿಷ್ಟು ವರ್ಷ ಶಾಲೆಗೆ ಹೋಗಿ ಬಿಟ್ಟವರು ಆಗಿದ್ದಾರೆ. ನಾನು ಕೇಳಿದ ಪ್ರಶ್ನೆಗಳು ನಾವು ಅಂದು ಕೊಂಡಿರುವ ಸರಳವಾದ ಮತ್ತು ಎಲ್ಲರಿಗೂ ತಿಳಿದಿದೆ ಎಂದು ನಾವು ಪರಿಭಾವಿಸಿರುವ ವಿಷಯಗಳೇ ಆಗಿವೆ. ನಾನು ಕೇಳಿದ ಪ್ರಶ್ನೆಗಳು ಈ ಕೆಳಕಾಣಿಸಿದಂತಿವೆ.

೧. ಚುನಾವಣೆ ಏಕೆ ನಡೆಯುತ್ತದೆ ?

೨. ಮುಂದಿನ ತಿಂಗಳು ಚುನಾವಣೆ ಏತಕ್ಕಾಗಿ ನಡೆಯುತ್ತದೆ ?

೩. ನಿಮ್ಮ ಓಟು ಇಂತಹವರಿಗೆ ಎಂದು ಹೇಗೆ ನಿರ್ಧರಿಸುತ್ತೀರಿ ?

೪. ಕೋಮುವಾದ ಎಂದರೆ ಏನು?

೫. ಎಡ - ಬಲ ಎಂದರೆ ಏನು ?

೬. ಜಾತ್ಯತೀತತೆ ಎಂದರೆ ಏನು ?

೭. ಚುನಾವಣಾ ಪ್ರಣಾಳಿಕೆ ಎಂದರೆ ಏನು ?

೮. ಸಂವಿಧಾನ ಎಂದರೆ ಏನು ?

೯. ಡೆವಲಪ್ಮೆಂಟ್ ಎಂದರೆ ಏನು?

ಆಶ್ಚರ್ಯವೆಂದರೆ ಅವರಲ್ಲಿ ನೂರಕ್ಕೆ ೯೮ ಜನಕ್ಕೆ ಈ ಎಂಟೂ ಪ್ರಶ್ನೆಗಳಿಗೆ ಉತ್ತ-ರಿಸಲಾಗಿಲ್ಲ. ಶೇಕಡಾ ಇಬ್ಬರು ೨ ನೆಯ ಪ್ರಶ್ನೆಗೆ ಸರಿಯಾದ ಉತ್ತರ ನೀಡಿದರು. ಶೇಕಡಾ ೧ ಜನ ೧ ನೇ ಪ್ರಶ್ನೆಗೆ ಸುಮಾರಾಗಿ ೨ ನೇ ಪ್ರಶ್ನೆಗೆ ಸರಿಯಾಗಿ , ೯ ನೇ ಪ್ರಶ್ನೆ ಡೆವಲಪ್ಮೆಂಟ್‌ಗೆ ರಸ್ತೆ ಮಾಡಿಸುವುದು, ನಲ್ಲಿ ಹಾಕಿಸುವುದು, ದೀಪ ಹಾಕಿಸುವುದು ಎಂದು ಉತ್ತರ ನೀಡಿದರು. ಹೆಚ್ಚಿನ ಮಹಿಳೆಯರು ಮನೆಯ ಗಂಡಸು ಯಾರಿಗೆ ಹೇಳುತ್ತಾನೋ ಅವರಿಗೆ ನಮ್ಮ ಓಟು ಅಂದರು. ಒಂದಿಬ್ಬರು ಅವರು ಊರಿಗೆ ಬಂದಾಗ ಆರತಿ ತಟ್ಟೆಗೆ ಯಾರು ಜಾಸ್ತಿ ಹಣ ಹಾಕುತ್ತಾರೋ ಅವರಿಗೆ ನಮ್ಮ ಓಟು ಅಂದರು.

ಈ ಮಧ್ಯೆ ನಮ್ಮಲ್ಲಿ ಒಂದು ಶಿಬಿರಕ್ಕೆ ಬಂದ ನಗರದ ಮೊದಲ ವರ್ಷ ಪದವಿಯ ೧೫ ವಿದ್ಯಾರ್ಥಿಗಳಿಗೆ ಹೆಚ್ಚು ಕಮ್ಮಿ ಇವೇ ಪ್ರಶ್ನೆಯನ್ನ ಕೇಳಿದೆ. ಆಶ್ಚರ್ಯವೆಂದರೆ ನಮ್ಮ ಹಳ್ಳಿಗ-ರಿಗೂ ನಗರದ ವಿದ್ಯಾರ್ಥಿಗಳಿಗೂ ಏನೂ ವ್ಯತ್ಯಾಸವಿರಲಿಲ್ಲ. ೧೫ ರಲ್ಲಿ ಒಂದಿಬ್ಬರು ಚುನಾವಣೆ ಲೋಕಸಭೆಗೆ ಎಂದರು. ಒಬ್ಬನೆ ಒಬ್ಬ ತಡವರಿಸುತ್ತಾ ವಿಧಾನ ಸಭೆ ಎಂದ. ಚುನಾವಣಾ ಪ್ರಣಾಳಿಕೆ ಎಂಬ ಶಬ್ದವನ್ನೇ ಕೇಳಿಲ್ಲ ಎಂದು ಎಲ್ಲರೂ ಹೇಳಿದರು. ಎಡ ಪಂಥೀಯ ಬಲ ಪಂಥೀಯ ಎಂದರೆ ಆಳುವ ಪಕ್ಷ ವಿರೋಧ ಪಕ್ಷ ಎಂದು ಕೆಲವರು ಅಂದರು, ಕೋಮುವಾದ ಎಂದರೆ ಗೊತ್ತಿಲ್ಲ ಎಂದರು. ಜಾತ್ಯತೀತತೆ ಎಂದರೆ ಜಾತಿ ವ್ಯವಹಾರ ಮಾಡುವವರು ಎಂದರು, ಕಡೆಗೆ ಸಂವಿಧಾನ ಎಂದರೆ ಗೊತ್ತಿಲ್ಲ ಎಂದು ನಿರಾಳವಾಗಿ ಹೇಳಿದರು. ಎಲ್ಲರೂ ತಾವು ದಿನಪತ್ರಿಕೆಯನ್ನು

ಓದುವುದಿಲ್ಲ ಎಂದರು. ಅಭ್ಯರ್ಥಿಯ ಆಯ್ಕೆ ಪ್ರಶ್ನೆ ಬಂದಾಗ ಸರಿಯಾದವರನ್ನು ಆರಿಸಬೇಕು ಎಂದರು. ಸರಿಯಾದವರು ಯಾರು ಎಂಬ ಮುಂದಿನ ಪ್ರಶ್ನೆಗೆ ಸುಮ್ಮನಾದರು. ಹೆಚ್ಚಿನವರು ತಮಗೆ ಉತ್ತರ ಗೊತ್ತಿಲ್ಲದ ಕಾರಣ ನಮಗೆ 'ಪೊಲಿಟಿಕ್ಸ್‌ನಲ್ಲಿ ಇಂಟ್ರಸ್ಟ್ ಇಲ್ಲ ಸಾರ್' ಎಂಬ ಹಾರಿಕೆಯ ಉತ್ತರವನ್ನು ನೀಡಿದರು.

ನಮ್ಮ ಹೆಚ್ಚಿನ ಮತದಾರರು ಹೀಗೆ ಇದ್ದಾರೆ ಎಂದು ನನ್ನ ಅನಿಸಿಕೆ. ಅಂದರೆ ೫ ಕೋಟಿ ಮತದಾರರಲಿ ಕನಿಷ್ಟ ೪ ಕೋಟಿ ಮತದಾರರು ಹೀಗಿರಬಹುದೇ ? ಅಂದರೆ ಎಂತಹ ಚುನಾವಣೆ ನಮ್ಮದು ? ಅರಿವಿನಿಂದ ಮತ ಚಲಾಯಿಸುವವರು ಶೇ ೧೦ -೧೫ ಇರಬಹುದೇ? ಅಂದರೆ ಗೆದ್ದವರು ಬಹಳ ಕಡಿಮೆ ಜನರ ನಿಜ ಪ್ರತಿನಿಧಿ ಆಗಿರುತ್ತಾನೆ. ಹೀಗಿದ್ದೂ ಗೆದ್ದ ಕೂಡಲೆ ಸರ್ಕಾರಗಳು ಜನರಿಂದ ಆಯ್ಕೆಯಾದ ಸರ್ಕಾರ ಆಗಿಬಿಡುತ್ತದೆ. ಮತದಾರರಿಗೆ ಮತ್ತು ಪ್ರತಿನಿಧಿಗಳಿಗೆ ಚುನಾವಣೆಯಲ್ಲಿ ಗೆಲ್ಲುವುದು ಎಂದರೆ ಕಾರ್ಯಾಂಗದಲ್ಲಿ ಕೈ ಆಡಿಸಲು ಸಿಗುವ ಸವಲತ್ತು ಎಂಬುದಷ್ಟಕ್ಕೇ ಅವರ ಯೋಚನೆಗಳು ನಿಂತು ಹೋಗಿವೆ. ಶಾಸಕನಾಗಿ ಮಾಡಬೇಕಾದ ಬಹುಮುಖ್ಯವಾದ ಕೆಲಸ ಶಾಸನ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಪರ ಶಾಸನಗಳು ರಚನೆಯಾಗುವಂತೆ ನೋಡಿಕೊಳ್ಳುವುದು ಎಂಬುದು ಗೊತ್ತಿರಲಿಕ್ಕೇ ಇಲ್ಲ.

ಹಾಗಾಗಿ ಈ ಚುನಾವಣೆಗಳಿಂದ ನಾವು ಹೆಚ್ಚಿನದೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ನಮ್ಮೆಲ್ಲ ಭೃಷ್ಟಾಚಾರಗಳು ಹೆಮ್ಮರವಾಗಿ ಬೆಳೆಯಲು ಬೇಕಾದ ಬೀಜ ಮತ್ತು ಗೊಬ್ಬರ ನಮ್ಮ ಚುನಾವಣೆಯಲ್ಲಿ ಇರುವುದರಿಂದ ಚುನಾವಣೆಯಲ್ಲಿ ಹಣದ ಕೈವಾಡ ಕಡಿಮೆಯಾಗದಿದ್ದರೆ ನಾವು ಈ ವ್ಯವಸ್ಥೆಯಲ್ಲಿ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ನಮ್ಮ ಪ್ರಜಾಪ್ರಭುತ್ವ ಕೇವಲ ಐದು ವರ್ಷಕ್ಕೆ ಒಮ್ಮೆ ಬರುವ ದೊಡ್ಡ ಜಾತ್ರೆಯಾಗಿದೆ. ಜಾತ್ರೆ ಮುಗಿದ ಮೇಲೆ ಜಾತ್ರೆ ನಡೆದ ಜಾಗದಲ್ಲಿ ಬಿದ್ದಿರುವ ಕಸ, ಕಾಗದ, ಪ್ಲಾಸ್ಟಿಕ್‌ನಂತೆ ಇಡೀ ದೇಶ ಇರುತ್ತದೆ. ಎಲ್ಲಿ ನೋಡಿದರೂ ಗಲೀಜು. ಚುನಾವಣೆ ಸ್ವಚ್ಛವಾಗಿ ಹಣದ ಪ್ರಭಾವ ಇಲ್ಲದೆ ನಡೆಯುವಂತೆ ನೋಡಿಕೊಳ್ಳದೆ ಎಲ್ಲ ಕಡೆ ಭೃಷ್ಟರು ಎಂದು ಕೊರಗುವುದು ಬೇವಿನ ಬೀಜ ಬಿತ್ತಿ ಮಾವಿನ ಫಸಲು ನಿರೀಕ್ಷಿಸಿದಂತೆ. ಹಾಗಾಗಿ ಚುನಾವಣಾ ಪಾರದರ್ಶಕತೆಯ ಕಡೆಗೂ ತೀವ್ರವಾಗಿ ಯೋಚಿಸಬೇಕಿದೆ. ಜೊತೆಗೆ ಸರ್ಕಾರದ ವ್ಯವಸ್ಥೆ ಹೆಚ್ಚು ಹೆಚ್ಚು ವಿಕೇಂದ್ರಿಕೃತಗೊಂಡು ನಮ್ಮ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ದೊರೆಯುವಂತೆ ಮಾಡುವುದು, ಸ್ಥಳೀಯ ಸಂಪನ್ಮೂಲಗಳು ಸ್ಥಳೀಯರ ನಿಯಂತ್ರಣದಲ್ಲಿ ಇರುವಂತೆ ನೋಡಿಕೊಳ್ಳುವುದು ಮತ್ತು ಸ್ಥಳೀಯರು ತಮಗೆ ಬೇಕಾದ ಅಭಿವೃದ್ಧಿ ಚಟುವಟಿಕೆಗಳನ್ನು ತೀರ್ಮಾನಿಸಲು ಅವಕಾಶ ಕೊಡುವುದು ಸಮಸ್ಯೆಗಳಿಗೆ ಇರುವ ಉತ್ತರ ಆಗಬಲ್ಲದು. ಅದು ಮತ್ತೆ ಚುನಾವಣೆ ಮೂಲಕವೇ ಆಗಬೇಕಿದೆ. ಇದು ವೃಕ್ಷ ಬೀಜ ನ್ಯಾಯವಾಗಿಯೇ ಉಳಿದು ಬಿಡದಂತೆ ನೋಡಿ ಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ●

ಹೊಸ ಅರಣ್ಯ ನೀತಿ : ಒಂದು ಪರಾಮರ್ಶೆ



National Forest Policy 2018

ಕೇಂದ್ರ ಸರ್ಕಾರವು ಹೊಸ ಅರಣ್ಯ ನೀತಿಯ ಕರಡನ್ನು ಬಿಡುಗಡೆ ಮಾಡಿದೆ. ೧೯೮೮ ರ ಅರಣ್ಯ ನೀತಿಯಲ್ಲಿ ದೇಶದ ಅರಣ್ಯವನ್ನು ದೇಶದ ವಿಸ್ತೀರ್ಣದ ಮೂರನೇ ಒಂದು ಭಾಗಕ್ಕೆ ಹೆಚ್ಚಿಸುವ ಆಶಯವನ್ನು ವ್ಯಕ್ತಪಡಿಸಲಾಗಿತ್ತು. ಆದರೆ ಇಲ್ಲಿಯವರೆಗೂ ಅದು ದೂರದ ಮರೀಚಿಕೆಯಾಗಿಯೇ ಉಳಿಯಿತು. ಈಗ ಹೊರಬಿದ್ದಿರುವ ಕರಡು ತನ್ನ ಹಿಂದಿನ ಆಶಯವನ್ನು ಹೊತ್ತು ಮುಂದುವರೆಯುತ್ತದೆ ಎಂಬ ನಂಬಿಕೆ ಕಡಿಮೆಯಾಗಿದೆ ಎನ್ನುತ್ತಾರೆ ವಿಷಯ ಪರಿಣಿತರು. ಬದಲಿಗೆ ಈ ಹೊಸ ಅರಣ್ಯ ನೀತಿ ಬಂಡವಾಳಶಾಹಿಗಳು ಕಾಡನ್ನು ಹೊಗಲು ಹಾಸುತ್ತಿರುವ ಹಸಿರುಗಂಬಳಿಯಾಗಲಿದೆ ಎನ್ನುತ್ತಾರೆ. ಅರಣ್ಯ ನೀತಿ ೨೦೧೮ ರ ಕರಡಿನ ಬಗ್ಗೆ ತಜ್ಞರು ಈ ಕೆಳಕಾಣಿಸದ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

೧. ೧೯೮೮ ರ ಅರಣ್ಯ ನೀತಿ ಸ್ಥಳೀಯ ಜನಸಮುದಾಯ ಮತ್ತು ಪರಿಸರ ಕೇಂದ್ರಿತವಾಗಿತ್ತು. ಆದರೆ ಹೊಸ ನೀತಿ ನಾಟಾ ಮತ್ತು ಅರಣ್ಯಾಧಾರಿತ ಕೈಗಾರಿಕೆಗಳನ್ನು ಕೇಂದ್ರವಾಗಿಟ್ಟು ಕೊಂಡಿದೆ.

೨. ಇದು 'ಉತ್ಪಾದನಾ ಅರಣ್ಯ' ಮತ್ತು ನೆಡುತೋಪುಗಳಿಗೆ ಒತ್ತು ನೀಡಿದೆ.

೩. ಅರಣ್ಯಾಧಾರಿತ ಕೈಗಾರಿಕೆಗಳಿಂದ ಇನ್ನು ಹೆಚ್ಚಿನ ಒತ್ತಡ ಅರಣ್ಯದ ಮೇಲೆ ಉಂಟಾಗಲಿದೆ.

೪. 'ಉತ್ಪಾದನಾ ಅರಣ್ಯ' ನೀತಿಯಿಂದಾಗಿ ಹಿಮಾಲಯದ ನೈಸರ್ಗಿಕ ಮರಗಳಾದ ಓಕ್ ಮರಗಳ ಜಾಗವನ್ನು ಏಕಬೆಳೆಯ ಪೈನ್ ಮರಗಳು ಆಕ್ರಮಿಸಿಕೊಂಡು ಬಿಡುತ್ತವೆ. ಮಧ್ಯ ಭಾರತದಲ್ಲಿ ಸಾಲ್ ಮರದ ಬದಲಿಗೆ ಟೀಕ್ ಮರಗಳ ನೆಡುತೋಪಗಳು ಬರುತ್ತವೆ. ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣ ಕಾಡುಗಳನ್ನು ಅಕೇಶಿಯಾ ಮತ್ತು ನೀಲಗಿರಿ ಆಕ್ರಮಿಸಿಕೊಳ್ಳುತ್ತವೆ.

೫. ನೀಲಗಿರಿಯಂತಹ ಅನ್ಯ ಪ್ರದೇಶದ ಮರಗಳು ಪರಿಸರದ ಸಮಸ್ಯೆಯನ್ನು ಉಂಟುಮಾಡುತ್ತವೆ. ಈ ಪರದೇಶದ ಮರಗಳು ಅಂತರ್ಜಲವನ್ನು ವಿಪರೀತ ಹೀರಿಕೊಳ್ಳುತ್ತವೆ. ಅಲ್ಲದೆ ಬೇರೆ ಯಾವುದೇ ಸಸ್ಯಗಳನ್ನು ತಮ್ಮೊಂದಿಗೆ ಬೆಳೆಯಲು ಕೊಡುವುದಿಲ್ಲ.

೬. ಸುಮಾರು ೧.೩ ಲಕ್ಷ ಹಳ್ಳಿಗಳು ಅರಣ್ಯ ಮತ್ತು ಅರಣ್ಯಕ್ಕೆ ಲಗತ್ತಾಗಿ ಇವೆ.

೭. ೩೫೦ ರಿಂದ ೪೦೦ ಮಿಲಿಯನ್ ಜನರು ನೇರವಾಗಿ ತಮ್ಮ ಬದುಕಿಗೆ ಕಾಡನ್ನು ಅವಲಂಬಿಸಿದ್ದಾರೆ.

೮. ೧೯೮೮ ರ ಅರಣ್ಯನೀತಿ ಅರಣ್ಯಾಧಾರಿತ ಕೈಗಾರಿಕೆಗಳ ಹಿತ ಕಾಪಾಡಲು ಕಾಡಿನಲ್ಲಿರುವ ಜನ ಸಮೂಹಗಳನ್ನು ಬಲಿ ಕೊಡಕೂಡದು ಎಂದು ಹೇಳುತ್ತದೆ.

೯. ಆದರೆ ಈ ಹೊಸ ನೀತಿ ಇದನ್ನು ಮತ್ತಷ್ಟು ಗಟ್ಟಿಗೊಳಿಸದೆ ಅದನ್ನು ಸಡಿಲಗೊಳಿಸಲಿದೆ.

೧೦. ಈ ನೀತಿ ಅರಣ್ಯ ನಿರ್ವಹಣೆಯನ್ನು ಮತ್ತಷ್ಟು ಕೇಂದ್ರಿಕರಣಗೊಳಿಸಲು ಸಾಧ್ಯವಾಗುವಂತೆ ರಾಷ್ಟ್ರೀಯ ಮಂಡಲಿ ಮತ್ತು ಅರಣ್ಯ ಇಲಾಖೆಯನ್ನು ಸಜ್ಜು ಗೊಳಿಸಲಿದೆ ಜೊತೆಗೆ ಗ್ರಾಮಸಭೆ ಮತ್ತು ಸ್ಥಳೀಯ ಪಾಲ್ಗೊಳ್ಳುವಿಕೆಯನ್ನು ನಿಷ್ಕ್ರಿಯಗೊಳಿಸುತ್ತದೆ.

೧೧. ಹೊಸ ಕರಡು ಅರಣ್ಯಾಧಾರಿತ ಕೈಗಾರಿಕೆಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ಕೈಗಾರಿಕೆಗಳಿಗೆ ಬೇಕಾದ ನೆಡುತೋಪುಗಳಿಗೆ ಅವಕಾಶ ಮಾಡಿಕೊಡುತ್ತದೆ.

೧೨. ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಹೆಸರಿನಲಿ ಕೆಳದರ್ಜೆಯ ಅರಣ್ಯ ಭೂಮಿಯನ್ನು ಖಾಸಗಿಯವರಿಗೆ ಕೊಡುವ ಸಲಹೆ ಇದೆ. ಅಂದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಅರಣ್ಯ ಭೂಮಿಯನ್ನು ಕೊಡಲು ಸುಲಭವಾಗುತ್ತದೆ.

೧೩. ಅರಣ್ಯ ಪ್ರವಾಸೋದ್ಯಮದ ಹೆಸರಿನಲ್ಲಿ ಸ್ಥಳಿಯರನ್ನು ನಿಷ್ಕ್ರಿಯಗೊಳಿಸಿ ಅವರನ್ನು ಈ ಪ್ರವಾಸೋದ್ಯಮಕ್ಕೆ ಮತ್ತು ಅರಣ್ಯಾಧಾರಿತ ಕೈಗಾರಿಕೆಗಳಲ್ಲಿ ಕೂಲಿಕಾರರಾಗುವಂತೆ ಮಾಡಲಾಗುತ್ತದೆ.

ಎಚ್.ಎಸ್.ದೊರೆಸ್ವಾಮಿ : ನನ್ನ ಚದುರಿದ ನೆನಪುಗಳು

–ಸಂತೋಷ ಕೌಲಗಿ

ನೂರು ತುಂಬಿದ ಹಿರಿಯ ಅಜ್ಜ (?) ದೊರೆಸ್ವಾಮಿಯವರ ಬಗ್ಗೆ ಬರೆಯಬೇಕೆನಿಸುತ್ತಿದೆ. ನಮ್ಮ ಕಾಲಮಾನದಲ್ಲಿ ನಮ್ಮ ಹತ್ತಿರದ ವ್ಯಕ್ತಿಯೊಬ್ಬರು ನೂರು ವರ್ಷಗಳನ್ನು ಸಾರ್ಥಕವಾಗಿ ಬದುಕಿ ಶತಮಾನೋತ್ಸವವನ್ನು ಆಚರಿಸಿಕೊಳ್ಳುವುದು ಅವರಷ್ಟೇ ನಮಗೂ ಸಂಭ್ರಮದ ಅಪರೂಪದ ಘಟನೆ. ನಮ್ಮ ಬದುಕಿನಲ್ಲೂ ಅಂತಹ ಅವಿಸ್ಮರಣೀಯ ಪ್ರಸಂಗಕ್ಕೆ ಕಾರಣ-ರಾದ ಶ್ರೀ ದೊರೆಸ್ವಾಮಿಯವರಿಗೆ ನಾನು ವಂದಿಸುತ್ತೇನೆ. ದೊರಸ್ವಾಮಿಯವರ ಬಗ್ಗೆ ನಾನೇನು ಬರೆಯಲಿ? ಅವರ ಬಗ್ಗೆ ಕರ್ನಾಟದ ಜನರಿಗೆಲ್ಲರಿಗೂ ಗೊತ್ತು. ಹೋರಾಟಗಳು ಮತ್ತು ಸರಳ ಬದುಕಿನಿಂದಾಗಿ ಅವರು ಕರ್ನಾಟಕದ ಸಾಕ್ಷಿಪ್ರಜ್ಞೆಯಾಗಿ ಹೋಗಿದ್ದಾರೆ. ನಾನು ಅವರ ಸಾರ್ವಜನಿಕ ಬದುಕಿನ ಬಗ್ಗೆ ಏನೇ ಬರೆದರೂ ಅದು ಕ್ಲೀಶೆಯಾಗಿ ಹೋಗಬಹುದು. ಏಕೆಂದರೆ ಅದನ್ನು ಈಗಾಗಲೇ ಅನೇಕರು ಬರೆದಿದ್ದಾರೆ. ಅವರಿಗಿಂತ ೪೩ ವರ್ಷ ಚಿಕ್ಕವನಾದ ನಾನು ನನಗೆ ಬುದ್ಧಿ ಬಂದಾಗಿನಿಂದ ಅವರನ್ನು ಹತ್ತಿರದಿಂದ ನೋಡಿದ್ದೇನೆ. ಆ ನೆನಪುಗಳನ್ನೇ ಇಲ್ಲಿ ಹಂಚಿಕೊಳ್ಳುತ್ತೇನೆ.


ನಾನು ಮೊದಲ ಸಲ ದೊರೆಸ್ವಾಮಿಯವರನ್ನು ನೋಡಿದ ನೆನಪು ಇರುವುದು ೬೦ ರ ದಶಕದ ಕಡೆಯ ವರ್ಷಗಳಿರಬಹುದು. ನನಗಾಗ ಹತ್ತು ವರ್ಷ. ನನ್ನಪ್ಪನ ಕೈ ಹಿಡಿದು ಬೆಂಗಳೂರಿನ ಗಾಂಧಿ ಭವನಕ್ಕೆ ಹೋಗುತ್ತಿದ್ದೆ. ಅಲ್ಲಿರುತ್ತಿದ್ದ ಸರ್ದಾರ್ ವೆಂಕಟರಾಮಯ್ಯ, ಗರುಡಶರ್ಮ, ದೊರೆಸ್ವಾಮಿ, ವೆಂಕೋಬರಾವ್, ಸತ್ಯವ್ರತ ಮುಂತಾದವರನ್ನು ನನ್ನ ಅಪ್ಪ ಭೇಟಿ ಮಾಡುತ್ತಿದ್ದರು. ಪಕ್ಕದಲ್ಲಿ ಇದ್ದ ವಲ್ಲಭನಿಕೇತನಕ್ಕೆ ಹೋಗಿ ಅವರ ಹತ್ತಿರದ ಗೆಳೆಯರಾದ ಇ.ಪಿ.ಮೆನನ್ ಜೊತೆ ಹರಟುತ್ತಿದ್ದರು. ಆಗ ನಾನು ಗಾಂಧಿ ಭವನದ ವಿಶಾಲವಾದ ಜಾಗದಲ್ಲಿ ಆಟವಾಡುತ್ತಿದ್ದೆ, ಮೊದಲ ಮಹಡಿಯಲ್ಲಿದ್ದ ಗಾಂಧಿ ಮ್ಯೂಸಿಯಂನಲ್ಲಿದ್ದ ಗಾಂಧಿ ಫೋಟೋಗಳು, ಅವರು ಬರೆದ ಪತ್ರಗಳನ್ನು ನೋಡುತ್ತಿದ್ದೆ. ಗಾಂಧಿಯ ಪಾರ್ಥೀವ ಶರೀರದ ಎದೆಯಲ್ಲಿ ಗುಂಡು ಹೊಕ್ಕಿರುವ ಚಿತ್ರದ ಕೆಳಗೆ ಬರೆದಿರುತ್ತಿದ್ದ 'ಹೇ ರಾಮ್' ನೋಡಿ ಭಾವುಕನಾಗುತ್ತಿದೆ. ಆ ವಯಸ್ಸಿನಲ್ಲಿ ನನಗೆ ಯಾವಾಗಲೂ ದೊರೆಸ್ವಾಮಿಯವರು ಮತ್ತು ಗರುಡಶರ್ಮ ಇವರನ್ನು ಗುರುತು ಇಟ್ಟುಕೊಳ್ಳುವುದು ಕಷ್ಟವಾಗುತ್ತಿತ್ತು. ಇಬ್ಬರೂ ಒಂದೇ ರೀತಿ ಇದ್ದಾರೆಂದು ಗಲಿಬಿಲಿ ಉಂಟಾಗುತ್ತಿತ್ತು. ಇಬ್ಬರೂ ಖಾದಿ ದಟ್ಟಿ ಮತ್ತು ಖಾದಿ ಜುಬ್ಬಾ ತೊಟ್ಟಿರುತ್ತಿದ್ದರು. ಇಬ್ಬರ ಹೆಗಲ ಮೇಲೂ ಒಂದು ಖಾದಿ ವಸ್ತ್ರ ಇರುತ್ತಿತ್ತು. ಇಬ್ಬರೂ ಎತ್ತರದ ಆಳುಗಳು. ಗರುಡಶರ್ಮ ಎಂಬ ಹೆಸರು ನನಗೆ ಆಕರ್ಷಕವಾಗಿ ಕಾಣುತಿತ್ತು. ಗರುಡ ಎಂದ ಕೂಡಲೆ ನನ್ನ ಮನಸ್ಸಿನಲ್ಲಿ ಹದ್ದಿನ ಚಿತ್ರಣ ಬಂದು ಹೋಗುತ್ತಿತ್ತು. ಹಾಗೆಯೇ ಸತ್ಯವ್ರತರ ಮೊದಲ ಹೆಸರು 'ಗುಂಡಾಚಾರ್' ಕೂಡ ನನ್ನಲ್ಲಿ ಏನೋ ಕಲ್ಪನೆ ಮೂಡಿಸುತ್ತಿತ್ತು. ನನ್ನ ಅಪ್ಪ ಇವರೊಂದಿಗೆಲ್ಲಾ ಏನೇನೋ ಹರಟುತ್ತಿದ್ದರು. ಮಾತಿನ ಮಧ್ಯೆ ಗಾಂಧಿ, ವಿನೋಬಾ, ಜೆಪಿಯವರ ಹೆಸರುಗಳು ಬಂದು ಹೋಗುತ್ತಿದ್ದವು.

ಗಾಂಧಿ ಭವನದ ಒಳಸುದ್ದಿಗಳನ್ನೂ ಮಾತನಾಡುತ್ತಿದ್ದರು. ನನಗೆ ಅಲ್ಲಿರುತ್ತಿದ್ದವರೆಲ್ಲರಲ್ಲಿ ದೊರೆಸ್ವಾಮಿಯವರು ಹೆಚ್ಚು ಲವಲವಿಕೆಯಿಂದ ಇರುವಂತೆ ಕಾಣುತ್ತಿತ್ತು. ಎತ್ತರಕ್ಕಿದ್ದ ಅವರು ಬಗ್ಗಿ ನನ್ನನ್ನು 'ಏನಯ್ಯಾ' ಎಂದು ನನ್ನ ಗಲ್ಲ ಮುಟ್ಟಿ ಮಾತನಾಡಿಸುತ್ತಿದ್ದದ್ದು ಇನ್ನು ನೆನಪಿದೆ. ನನಗೆ ತಿಳಿವಳಿಕೆ ಬಂದಾಗಿನಿಂದ ನನ್ನ ಅಪ್ಪ ಯಾವಾಗಲೂ ಶುಭ್ರವಾದ ಬಿಳಿಯ ಖಾದಿ ಬಟ್ಟೆಯಲ್ಲಿ ಬಿಹಾರಿ ರೀತಿಯಲ್ಲಿ ಕಚ್ಚೆ ಪಚ್ಚೆ ತೊಟ್ಟು ಅದರ ಮೇಲೆ ಬಿಳಿಯ ಜುಬ್ಬ ಹಾಕಿಕೊಳ್ಳುತ್ತಿದ್ದರು. ಹಾಗಾಗಿ ದೊಡ್ಡವರು ಯಾವಾಗಲೂ ಶುಭ್ರವಾದ ಬಿಳಿಯ ಖಾದಿ ಬಟ್ಟೆಯನ್ನು ತೊಟ್ಟರೆ ಲಕ್ಷಣ ಎಂದು ನನ್ನ ಮನದಲ್ಲಿ ತೀರ್ಮಾನವಾಗಿತ್ತು. ಆದರೆ ದೊರೆಸ್ವಾಮಿಯವರು ದಟ್ಟಿ ಉಟ್ಟು ಅದರ ಮೇಲೆ ಬಣ್ಣದ ಖಾದಿಯ ಜುಬ್ಬಾ ಹಾಕಿರುತ್ತಿದ್ದರು. ಇದು ಬಹಳ ಸಲ ನನಗೆ ಇಷ್ಟವಾಗುತ್ತಿರಲಿಲ್ಲ. ಅದು ಅವರಿಗೆ ಲಕ್ಷಣವಾಗಿ ಕಾಣುತ್ತಿಲ್ಲ ಎನಿಸುತ್ತಿತ್ತು. ನನ್ನ ಅಪ್ಪ ಖಾದಿ ತೊಡುತ್ತಿದ್ದರೂ ಅದು ಸದಾ ಕಾಲ ಅಚ್ಚು ಕಟ್ಟಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ದೊರೆಸ್ವಾಮಿಗಳಿಗೆ ಅದರ ಬಗ್ಗೆ ಗಮನವಿದ್ದಂತೆ ಕಾಣುತ್ತಿರಲಿಲ್ಲ. ಅವರು ಯಾವಾಗಲೂ ಒಂದು ಅಳತೆ ದೊಡ್ಡದಾದ ಜುಬ್ಬಾ ಧರಿಸುತ್ತಿದ್ದಾರೆ ಎನಿಸುತ್ತಿತ್ತು. ನನಗೆ ನೆನಪಿರುವಾಗಿನಿಂದ ದೊರೆಸ್ವಾಮಿಗಳು ಹೀಗೆ ಇದ್ದಾರೆ ಎನಿಸುತ್ತಿದೆ. ಅವರು ದಪ್ಪ ಆಗಿದ್ದು ನಾನು ನೋಡಿಯೇ ಇಲ್ಲ. ಅವರ ಎತ್ತರಕ್ಕೆ ತಕ್ಕನಾಗಿ ಅವರು ದಪ್ಪವಾಗಿ ಇರಲೇ ಇಲ್ಲ. ಕುರ್ಚಿಯ ಮೇಲೆ ಕೂತಾಗಲೆಲ್ಲಾ ತಮ್ಮ ಬಲಗೈ ಹಸ್ತವನ್ನು ತಮ್ಮ ಗದ್ದಕ್ಕೆ ಆಧಾರವಾಗಿ ಕೊಟ್ಟು, ತೋರು ಬೆರಳಿನಿಂದ ತಮ್ಮ ಮೂಗನ್ನು ಸವ-ರಿಕೊಳ್ಳುವ ಅವರನ್ನು ನೋಡಿದಾಗೆಲ್ಲಾ, ಮೊದಲೇ ಉದ್ದವಾದ ತಮ್ಮ ಮೂಗನ್ನು ಇನ್ನೂ ಉದ್ದ ಮಾಡಿಕೊಳ್ಳುತ್ತಿದ್ದಾರೆ ಎನಿಸುತ್ತಿತ್ತು. ನಾನು ಪ್ರತಿವರ್ಷ ಅವರನ್ನು ತಪ್ಪದೆ ನೋಡುತ್ತಿದ್ದದ್ದು ಪಶ್ಚಿಮವಾಹಿನಿಯಲ್ಲಿ ನಡೆಯುತ್ತಿದ್ದ ಸರ್ವೋದಯ ಮೇಳದಲ್ಲಿ. ಅಲ್ಲಿ ಭಾಷಣ ಮಾಡುತ್ತಿದ್ದ ಎಲ್ಲ ಗಾಂಧಿ ವಿಚಾರವಂತರಿಗಿಂತ ಇವರ ಭಾಷಣ ನನಗೆ ಇಷ್ಟ ಆಗುತ್ತಿತ್ತು. ಅವರು ಏನು ಹೇಳುತ್ತಿದ್ದಾರೋ ಅದು ಪೂರ್ಣವಾಗಿ ಅರ್ಥವಾಗದಿದ್ದರೂ, ಕೊಂಚ ಬಾಗಿದ ಬೆನ್ನಿನ ಎತ್ತರದ ನಿಲುವಿನ ಅವರು ಮಾತನಾಡುವಾಗೆಲ್ಲಾ ತಮ್ಮ ಬಲಗೈಯನ್ನು ಮೇಲಕ್ಕೆ ಎತ್ತಿ,ಎತ್ತಿ ತಾವು ಹೇಳುತ್ತಿರುವುದನ್ನು ಸಮರ್ಥಿಸುತ್ತಿದ್ದ ರೀತಿಯನ್ನು ನೋಡುತ್ತಿದ್ದಾಗ, ಈ ಭಾಷಣ ಮುಗಿದ ಮೇಲೆ ನಮ್ಮೆಲ್ಲರನ್ನೂ ಕಟ್ಟಿಕೊಂಡು ಅವರು ಯಾವುದೋ ಹೋರಾಟಕ್ಕೆ ಹೋಗುತ್ತಾರೇನೋ ಎನಿಸುತ್ತಿತ್ತು. ಮಿಕ್ಕವರು ಗಾಂಧಿ ವಿಚಾರದ ಬಗ್ಗೆ ಮಾತನಾಡುತ್ತಿದ್ದರೆ ದೊರೆಸ್ವಾಮಿ ಅವರು, ಅದರ ಅನುಷ್ಠಾನದ ಬಗ್ಗೆಯೇ ಹೆಚ್ಚು ಮಾತನಾಡುತ್ತಿದ್ದರು ಅನಿಸುತ್ತದೆ.

ನನ್ನ ಅಪ್ಪನನ್ನು ಹೆಚ್ಚಿನ ಜನರು ಗೌರವದಿಂದ 'ಕೌಲಗಿಯವರೇ' ಎಂದು ಕರೆಯುತ್ತಿದ್ದರು. ಕೆಲವೇ ಕೆಲವರು ಮಾತ್ರ ಅವರ ಮೊದಲ ಹೆಸರಿನಿಂದ ಕರೆಯುತ್ತಿದ್ದರು. ಅಂತಹವರಲ್ಲಿ ದೊರೆಸ್ವಾಮಿ ಒಬ್ಬರು. ಮೊದಮೊದಲು ಅವರು ನನ್ನ ಅಪ್ಪನನ್ನು 'ಸುರೇಂದ್ರ' ಎಂದು ಕರೆದರೆ ನನಗೆ ಅಸಮಾಧಾನವಾಗುತ್ತಿತ್ತು. ಅವರು ನನ್ನ ಅಪ್ಪನಿಗೆ ಗೌರವ ಕೊಡುತ್ತಿಲ್ಲ ಎನಿಸುತ್ತಿತ್ತು. ಸಲಿಗೆ ಮತ್ತು ಪ್ರೀತಿ ಇದ್ದರೆ ಮಾತ್ರ ಮೊದಲ ಹೆಸರಿನಿಂದ ಕರೆಯಲು ಸಾಧ್ಯ ಎಂದು ಅರ್ಥವಾಗಲು ಸ್ವಲ್ಪ ವರ್ಷಗಳೇ ನನಗೆ ಹಿಡಿದವು.

ಮೇಲುಕೋಟೆಯಲ್ಲಿ ನನ್ನ ಅಪ್ಪ ಯಾವುದೇ ಕಾರ್ಯಕ್ರಮ ಹಮ್ಮಿಕೊಂಡರೂ, ಕರೆದ ಕೂಡಲೆ ಬರುತ್ತಿದ್ದವರು ದೊರೆಸ್ವಾಮಿಗಳು. ಎತ್ತರಕ್ಕೆ ಇರುವವರು ಯಾರು ಬಂದರು ಒಂದೆರಡು ಬಾರಿ 'ಜನಪದ ನಿಲಯ' ದ ಕುಳ್ಳಗಿನ ಬಾಗಿಲಿನ ಚೌಕಟ್ಟಿಗೆ ತಲೆ ಬಡಿಸಿಕೊಂಡು ನೋವು ಮಾಡಿಕೊಳ್ಳುವುದು ಖಂಡಿತ. ಆದರೆ ನನಗೆ ನೆನಪಿರುವಂತೆ ಎತ್ತರದ ದೊರೆಸ್ವಾಮಿಗಳು ಎಂದೂ ಆ ಚೌಕಟ್ಟಿಗೆ ತಲೆ ಬಡಿಸಿಕೊಂಡದ್ದು ನನಗೆ ನೆನಪಿಲ್ಲ. ಅವರಿಗೆ ನನ್ನ ಅಮ್ಮ ಮಾಡುತ್ತಿದ್ದ ಅಡಿಗೆ

ಬಹಳ ಇಷ್ಟ. 'ಏನು ಮಾಡಿದ್ದಿಯಾ ? ಗಿರಿಜಮ್ಮ' ಎನ್ನುತ್ತಾ ಕುಳಿತು ಸಂತೋಷದಿಂದ ಊಟ ಮಾಡುತ್ತಿದ್ದದ್ದು ಈಗ ನನ್ನ ನೆನಪಿನ ಭಾಗ. ದೊರೆಸ್ವಾಮಿಯವರು ನಮ್ಮಲ್ಲಿಗೆ ಬಂದಾಗಲೆಲ್ಲಾ ಮನೆಯ ಹಿರಿಯ ನೆಂಟರೊಬ್ಬರು ಮನೆಗೆ ಬಂದ ಭಾವ ನಮ್ಮದಾಗುತ್ತಿತ್ತು. ಮೇಲುಕೋಟೆಯ ಜನಪದ ಸೇವಾ ಟ್ರಸ್ಟಿನ ಎಲ್ಲ ಚಟುವಟಿಕೆಗಳು ಚೆನ್ನಾಗಿ ನಡೆಯುವಲ್ಲಿ ನನ್ನ ಅಮ್ಮನ ಪಾತ್ರ ದೊಡ್ಡದಿತ್ತೆಂದು ಅವರ ಅಚಲ ನಂಬಿಕೆ. ಹಾಗಾಗಿ ನನ್ನ ಅಪ್ಪನ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವಾಗಲೆಲ್ಲಾ ನನ್ನ ಅಪ್ಪನಿಗಿಂತ ನನ್ನ ಅಮ್ಮನ ಬಗ್ಗೆಯೇ ಅವರು ಹೆಚ್ಚು ಮಾತನಾಡಿದ್ದಾರೆ.




ಜನಪದ ಸೇವಾ ಟ್ರಸ್ಟಿನ ಸ್ವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ
ಶ್ರೀಮತಿ ಮತ್ತು ಶ್ರೀ ಕೌಲಗಿ ಅವರೊಂದಿಗೆ, ಜೊತೆಯಲ್ಲಿ ಎಚ್.ಎಲ್.ಕೇಶವಮೂರ್ತಿ.

ಬೆಂಗಳೂರಿನಿಂದ ದೂರ ಉಳಿದಿದ್ದ ನನ್ನ ಅಪ್ಪ ಕರ್ನಾಟಕ ಸರ್ವೋದಯ ಮಂಡಲದ ಜವಾಬ್ದಾರಿಯನ್ನು ಹಲವು ವರ್ಷ ಹೊತ್ತಿದ್ದರು. ಮೊದಲ ಬಾರಿಗೆ ಕರ್ನಾಟಕದಲ್ಲಿ, ಅದೂ ಮೇಲುಕೋಟೆಯಲ್ಲಿ ಅಖಿಲ ಭಾರತ ಸರ್ವೋದಯ ಸಮಾಜದ ಸಮ್ಮೇಳನವನ್ನು ಆಯೋಜಿಸಿದ್ದರು. ಕರ್ನಾಟದ ತುಂಬೆಲ್ಲಾ ಸುತ್ತಾಡಿ ಅದಕ್ಕೆ ಹಣ ಸಂಗ್ರಹಿಸಿ ರಾಷ್ಟ್ರ ಮಟ್ಟದ ಸರ್ವೋದಯ ನಾಯಕರೆಲ್ಲಾ ಮೇಲುಕೋಟೆಗೆ ಬರುವಂತೆ ಮಾಡಿದರು. ಸುಮಾರು ೨೦೦೦ ಪ್ರತಿನಿಧಿಗಳು ಮೇಲುಕೋಟೆಗೆ ಬಂದರು. ಸುಂದರಲಾಲ್ ಬಹುಗುಣ ಉಷಾ ಮೆಹ್ತಾ, ಠಾಕೂರ್ ದಾಸ್ ಭಂಗ್ ಮುಂತಾದವರೆಲ್ಲಾ ಬಂದಿದ್ದರು. ಆದರೆ ಯಾವ ಕಾರಣಕ್ಕೋ ಏನೋ, ದೊರೆಸ್ವಾಮಿ ಮತ್ತು ಸತ್ಯವ್ರತ ಇದರಲ್ಲಿ ಸಕ್ರಿಯವಾಗಿ ಭಾಗವಹಿಸಲಿಲ್ಲ. ಒಂದು ರೀತಿಯಲ್ಲಿ ಅದಕ್ಕೆ ಭಹಿಷ್ಕಾರ ಹಾಕಿಬಿಟ್ಟಿದ್ದರು. ಸಮ್ಮೇಳನದಲ್ಲೂ ಭಾಗವಹಿಸಲಿಲ್ಲ. ಈ ಬಗ್ಗೆ ನನ್ನ ಅಪ್ಪನಿಗೆ ದೊರೆಸ್ವಾಮಿಯವರ ಬಗ್ಗೆ ಅಸಮಾಧಾನವಿತ್ತು. ಆದರೆ ಅದು ಕೆಲ ದಿನಗಳು ಮಾತ್ರ. ದೊರೆಸ್ವಾಮಿಗಳು ಹೋರಾಟ ಎಂದರೆ ಯಾರೊಂದಿಗೆ ಬೇಕಾದರೂ ಹೊರಟು ಹೋಗುತ್ತಾರೆ ಎಂಬ ಮಾತು 'ಗಾಂಧಿ' ವಲಯದಲ್ಲಿ ಕೇಳುತ್ತಿತ್ತು. ಅವರು ತಮ್ಮ ಅನೇಕ ಹೋರಾಟಗಳನ್ನು ಎಡಪಂಥೀಯರೊಂದಿಗೆ ಸೇರಿ ನಡೆಸಿದ್ದು ಇದಕ್ಕೆ ಸಾಕ್ಷಿಯಾಗಿತ್ತು. ಇದು ಏಕೆ ಹೀಗಾಗುತ್ತಿತ್ತೆಂದರೆ ದೊರೆಸ್ವಾಮಿಗಳಿಗೆ ಗಾಂಧಿ ವಿಚಾರಕ್ಕಿಂತ ಅದರ ಅನುಷ್ಠಾನದಲ್ಲಿ ನಂಬಿಕೆ ಹೆಚ್ಚು. ದೊರೆಸ್ವಾಮಿಯವರು ಎಂದೂ ಮಡಿವಂತ ಗಾಂಧಿವಾದಿಯಾಗಲಿಲ್ಲ. ತಾವು ಸಕ್ರಿಯವಾಗಿ ಸಮಾಜದ ಆಗುಹೋಗುಗಳಿಗೆ ಸ್ಪಂದಿಸದಿದ್ದರೆ ತಾವು ಮೂಲೆಗುಂಪು ಆಗಿಹೋಗುತ್ತೇವೆ ಎಂಬುದು ಅವರ ನಂಬಿಕೆ.

ನನ್ನ ಅಮ್ಮ ಎರಡು ವರ್ಷದ ಹಿಂದೆ ತೀರಿಹೋದಾಗ ದೊರೆಸ್ವಾಮಿಗಳಿಗೆ ೯೮ ವರ್ಷ. ಸುದ್ದಿ ತಿಳಿದೊಡನೆಯೇ ದೂರದ ಬೆಂಗಳೂರಿನಿಂದ ಜನಪದ ನಿಲಯಕ್ಕೆ ಬಂದರು. ಅಂತ್ಯಕ್ರಿಯೆ ಮುಗಿಯುವವರೆಗೂ ಜೊತೆಗಿದ್ದು ನಮ್ಮೆಲ್ಲರನ್ನೂ ಸಮಾಧಾನ ಪಡಿಸಿದರು. ಎಂಟು ತಿಂಗಳ ಹಿಂದೆ ನನ್ನ ಅಪ್ಪ ನಿಧನರಾದಾಗ ಅವರ ಆರೋಗ್ಯ ಸರಿಯಲ್ಲಿದೆ ಆಸ್ಪತ್ರೆಯಲ್ಲಿದ್ದರು. ಅವರ ದನಿ ಕ್ಷೀಣವಾಗಿತ್ತು. ಆದರೂ ಫೋನು ಮಾಡಿ ನಮಗೆಲ್ಲರಿಗೂ ಸಮಾಧಾನ ಹೇಳಿದರು.

ಕಳೆದ ಜನವರಿಯಲ್ಲಿ ನಾವು ಇಲ್ಲಿ ಆಯೋಜಿಸಿದ್ದ ಜೆ.ಸಿ ಕುಮಾರಪ್ಪನವರ ಕಾರ್ಯಕ್ರಮದ ಸಂದರ್ಭ. ನನ್ನ ಅಪ್ಪ ಇಲ್ಲದೆ ನಾವು ವ್ಯವಸ್ಥೆ ಮಾಡಿದ್ದ ಮೊದಲ ಕಾರ್ಯಕ್ರಮ ಅದಾಗಿತ್ತು. ಅವರು ಇಲ್ಲದೆ ಕಾರ್ಯಕ್ರಮ ಮಾಡುವುದು ಭಾವನಾತ್ಮಕವಾಗಿ ಬಹಳ ಕಷ್ಟ ಎನಿಸತೊಡಗಿ-ತು. ತಕ್ಷಣ ದೊರೆಸ್ವಾಮಿಯವರಿಗೆ ಫೋನು ಮಾಡಿ ದಯಮಾಡಿ ತಾವು ಬಂದು ಕಾರ್ಯಕ್ರಮ ಉದ್ಘಾಟಿಸಬೇಕು ಎಂದೆ. ಹಿಂದೆ ಮುಂದೆ ನೋಡದೆ 'ಬರುತ್ತೇನಯ್ಯಾ' ಎಂದರು. ಸರಿಯಾದ ಸಮಯಕ್ಕೆ ಬಂದು ನಮ್ಮೊಂದಿಗೆ ಇಡೀ ದಿನ ಇದ್ದರು. ಅತ್ಯಂತ ಪ್ರಸ್ತುತವಾಗಿ ಕುಮಾರಪ್ಪ ಮತ್ತು ಗಾಂಧಿಯ ಬಗ್ಗೆ ಮಾತನಾಡಿದರು. ಅಚ್ಚು ಕಟ್ಟಾಗಿ ಊಟ ಮಾಡಿದರು. ರಾಗಿ ಮುದ್ದೆಯನ್ನೂ ತಿಂದರು. ಪಾಯಸವನ್ನು ಎರಡೆರಡು ಸಲ ಬಡಿಸಿಕೊಂಡರು. ಅಂದು ಅವರಿಗೆ ನಮ್ಮ ನೇಯ್ಗೆ ಕೇಂದ್ರವನ್ನು ನೋಡಲು ಹೋಗಲು ಆಗಲಿಲ್ಲ. ಹೊರಡುವಾಗ ಮುಂದಿನ ಸಲ ನೋಡುವೆ ಎಂದರು. ಆಗ ಅವರಿಗೆ ೯೯ ವರ್ಷ ೯ ತಿಂಗಳು. ಇದು ನಮ್ಮ ಶ್ರೀ ಎಚ್.ಎಸ್.ದೊರೆಸ್ವಾಮಿ. ಅಷ್ಟೊಂದು ಆಶಾಭಾವ ! ಹಾಗಿರದಿದ್ದರೆ ಸಾರ್ವಜನಿಕ ಬದುಕಿನಲ್ಲಿ ೮೦ ವರ್ಷಗಳ ಕಾಲ ಸತತವಾಗಿ ಹೋರಾಟ ಮಾಡುತ್ತಾ ಇರಲಾಗುತ್ತದೆಯೇ?



ಜನವರಿಯಲ್ಲಿ ಹೊಸ ಜೀವನ ದಾರಿಯಲ್ಲಿ ನಡೆದ ಕುಮಾರಪ್ಪ ಚಿಂತನಾ ಶಿಬಿರಕ್ಕೆ ಆಗಮಿಸುತ್ತಿರುವ ೯೯ ವರ್ಷ ೯ ತಿಂಗಳ ಶ್ರೀ ದೊರೆಸ್ವಾಮಿ

ಚಿಂತನ

– ವೈನತೇಯ

ಕಾಯಕತತ್ತ್ವ

ಬಸವಣ್ಣ ಟಾಲ್‌ಸ್ಟಾಯ್ ಹಾಗೂ ಗಾಂಧೀಜಿ – ಈ ಮೂವರು 'ಕಾಯಕತತ್ತ್ವ'ವನ್ನು ಪ್ರತಿಪಾದಿಸಿದ ಮಹಾನ್ ಚಿಂತಕರು. ಬದುಕುವ ಸಲುವಾಗಿ ಅವಲಂಬಿಸಿರುವ ಯಾವುದೇ ನ್ಯಾಯಸಮ್ಮತ ವೃತ್ತಿಯಾದರೂ ಸ್ಥೂಲಾರ್ಥದಲ್ಲಿ ಅದೊಂದು ಕಾಯಕವೆನ್ನಿಸಿಕೊಳ್ಳುತ್ತದೆ. ಬಸವಣ್ಣನವರೂ ಅವರ ಅನುಯಾಯಿಗಳಾದ ಶರಣರೂ ಕಾಯಕವನ್ನು ಒಂದು ದೈವಿಕ ಮೌಲ್ಯವನ್ನಾಗಿ ಪರಿಭಾವಿಸಿದರು. 'ಕಾಯಕವೇ ಕೈಲಾಸ' ಎಂಬ ಔನತ್ಯಕ್ಕೂ ಅದನ್ನು ಕೊಂಡೊಯ್ದರು. ವ್ಯಕ್ತಿಯು ಸ್ವಂತ ದುಡಿಮೆಯಿಂದ ಗಳಿಸಿದ ಎಂಥ ಅಲ್ಪವಸ್ತುವಾದರೂ ಅದು ಪರಮಾತ್ಮನಿಗೆ ಅರ್ಪಿಸಲು ಯೋಗ್ಯವಾದುದು ಎಂಬ ನಂಬಿಕೆ ಶಿವಶರಣರದು. '.... ಕಾರೆಯ ಸೊಪ್ಪಾದರೂ ಕಾಯದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ, ದುರಾಸೆಯಿಂದ ಬಂದುದು ಅನರ್ಪಿತ' – ಇದು ವಚನವೊಂದರ ಸಾಲು. ಸಮಾಜದಲ್ಲಿ ಮೇಲು ಕೀಳುಗಳ ತಾರತಮ್ಯವನ್ನು ಕಂಡು, ಅದರಿಂದ ವ್ಯಷ್ಟಿ ಮತ್ತು ಸಮಷ್ಟಿ – ಎರಡೂ ನೆಲೆಗಳಲ್ಲಿ ಉಂಟಾಗುವ ಹಾನಿಯನ್ನು ಮನಗಂಡಿದ್ದ ಬಸವಣ್ಣನವರು ಕಾಯಕ ಸಮಾನತೆಯ ತತ್ತ್ವವನ್ನು ಪ್ರತಿಪಾದಿಸುದರ ಮೂಲಕ ಈ ಸಾಮಾಜಿಕ ಸ್ತರ ವ್ಯತ್ಯಾಸಗಳನ್ನು ನಿವಾರಿಸಲು ಪ್ರಯತ್ನಿಸಿದರು. ಎಲ್ಲ ವೃತ್ತಿಗಳೂ ಅರ್ಥಾತ್ ಎಲ್ಲ ಕಾಯಕಗಳೂ ಸಮಾನವದವು. ಅವುಗಳು ಮೇಲುಕೀಳು ಎಂಬ ಜಾತಿ ಪದ್ಧತಿಗೆ ಕಾರಣವಾಗಬಾರದು – ಎಂಬುದೇ ಬಸವಣ್ಣನವರ ಸಾಮಾಜಿಕ ಸುಧಾರಣೆಯ ಪ್ರಧಾನ ಧ್ವನಿ. "ಬೇಡಂಗೆ. ಜೇಡಂಗೆ, ಡೋಹರಂಗೆ, ಹೊಲೆಯಂಗೆ ರೂಢಿಗೀಶ್ವರನೊಲಿದ ಪರಿಯ ನೋಡಾ" ಎಂಬ ವಚನೋದ್ಗಾರವಾಗಲೀ "...ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ... ವೇದವನೋದಿ ಹಾರುವನಾದ... ಇದು ಕಾರಣ ಕೂಡಲ ಸಂಗಮದೇವಾ, ಲಿಂಗ ಸಂಗವನರಿತವನೇ ಕುಲಜನು.." ಎಂಬ ಹೇಳಿಕೆಯಾಗಲೀ ಕಾಯಕದ ಗೌರವವನ್ನೇ ಸಾರಿ ಸಾರಿ ಹೇಳುತ್ತವೆ. ವ್ಯಕ್ತಿಯ ನೆಲೆಯಲ್ಲಿ ಕಾಯಕವೆಂಬುದೊಂದು ಶ್ರದ್ಧೆ ನಿಷ್ಠೆಗಳಿಂದ ಕೂಡಿದ ವ್ರತವಾಗಿರಬೇಕು: ಇಲ್ಲದಿದ್ದರೆ ಅದು ಕೇವಲ ಕಾಟಾಚಾರದ ಕ್ರಿಯೆಯಾಗುತ್ತದೆ–ಎಂದರು ಬಸವಣ್ಣನವರು. ಕಾಯಕದಲ್ಲಿ ನಿರತವಾಗಿದ್ದಾಗ ಗುರುದರ್ಶನ ಲಿಂಗಪೂಜೆ, ಜಂಗಮಸೇವೆ – ಎಲ್ಲವೂ ಗೌಣ, ಸಾಕ್ಷಾತ್ ಈಶ್ವರನಾದರೂ ಕಾಯಕ ಮಾಡಲೇಬೇಕು – ಎಂಬಂಥ ಉತ್ಕಟ

ಕಾಯಕಶ್ರದ್ಧೆ ಶರಣರದು.

ಟಾಲ್ಸ್ಟಾಯ್ ಕಾಯಕವನ್ನು 'bread labour' ಎಂದು ಕರೆದು, ಅನ್ನವನ್ನು ಸ್ವಂತ ಪರಿಶ್ರಮದಿಂದ ಪಡೆದು ಅನುಭವಿಸುವ 'ದುಡಿಮೆಯ ಘನತೆ' ಯನ್ನು ತಮ್ಮದೊಂದು ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ, "ನಿನ್ನ ಬೆವರನ್ನು ಸುರಿಸಿಯೇ ಹಿಟ್ಟು ತಿನ್ನು" ಎನ್ನುವ ಬೈಬಲ್ಲಿನ ಮಾತು ಟಾಲ್ಸ್ ಟಾಯ್ ಅವರ ಚಿಂತನೆಯ ಹಿನ್ನೆಲೆಯಲ್ಲಿದೆ. ಬಸವಣ್ಣನವರು ಪ್ರತಿಪಾದಿಸದ ಕಾಯಕ ಸಮಾನತೆಯ ತತ್ತ್ವವನ್ನೇ ರಸ್ಕಿನ್ ತನ್ನ 'unto This Last' ಎಂಬ ಪುಸ್ತಕದಲ್ಲಿ ಎತ್ತಿ ಹಿಡಿದಿದ್ದಾನೆ. ವಕೀಲನ ಕೆಲಸ ಹಾಗೂ ಕ್ಷೌರಿಕನ ಕೆಲಸ - ಇವೆರಡರಲ್ಲಿ ಯಾವುದೇ ಮೇಲುಕೀಳುಗಳಿಲ್ಲವೆಂಬ ರಸ್ಕಿನ್‌ನ ಅಭಿಪ್ರಾಯ ಬಸವಣ್ಣ ಹಾಗೂ ಅವರ ಅನುಯಾಯಿಗಳ ಅಭಿಪ್ರಾಯಕ್ಕೆ ಸಂವಾದಿಯಾಗಿದೆ.

ಟಾಲ್‌ಸ್ಟಾಯ್ ಹಾಗು ರಸ್ಕಿನ್‌ರಿಂದ ಪ್ರಭಾವಿತರಾದ ಗಾಂಧೀಜಿ ಕಾಯಕ ತತ್ತ್ವದ ಮಹತ್ವವನ್ನು ಮನಗಂಡು ಅದನ್ನು ತಮ್ಮ ಏಕಾದಶ ವ್ರತಗಳ ಪಟ್ಟಿಯಲ್ಲಿ 'ಶರೀರ ಶ್ರಮ' ಎಂಬ ಹೆಸರಿನಲ್ಲಿ ಸೇರಿಸಿಕೊಂಡರು. "ಅನ್ನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯೂ ಕಾಯಕ ಅಥವಾ ಶರೀರದ ಶ್ರಮದಲ್ಲಿ ಭಾಗಿಯಾಗಲೇ ಬೇಕು, ಇದೊಂದು ಈಶ್ವರೀ ನಿಯಮ" ಎನ್ನುತ್ತಾರೆ ಗಾಂಧೀಜಿ. ಯಜ್ಞ ಮಾಡದೇ ಅನ್ನ ತಿನ್ನುವವನು ಕಳ್ಳ -ಎಂಬುದು ಗೀತೆಯಲ್ಲಿ ಬರುವ ಮಾತು. ಇಲ್ಲಿ 'ಯಜ್ಞ' ಎಂಬ ಪದವನ್ನು ಗಾಂಧೀಜಿ 'ಅನ್ನದ ಕಾಯಕ' ಎಂದು ಅರ್ಥೈಸಿ ಅನ್ನಕ್ಕಾಗಿ ದುಡಿಯದೆ ಇನ್ನೊಬ್ಬರ ದುಡಿಮೆಯ ಮೇಲೆ ಅವಲಂಬಿಸಿ ಬದುಕುವಾತನನ್ನು ಕಳ್ಳ ಎನ್ನುತ್ತಾರೆ. ಬಸವಣ್ಣನವರಂತೆ ಗಾಂಧೀಜಿಯವರೂ ಶರೀರಶ್ರಮವನ್ನು ಸಮಾನವಾಗಿ ಕಾಣುವುದರ ಮೂಲಕ ಉಚ್ಚ - ನೀಚವೆಂಬ ಸಾಮಾಜಿಕ ಭೇದ ಮಾಯವಾಗುತ್ತದೆ ಎಂದು ಬಲವಾಗಿ ಪ್ರತಿಪಾದಿಸುತ್ತಾರೆ. ವ್ಯವಸಾಯ, ನೂಲು ತೆಗೆಯುವಿಕೆ, ನೇಯ್ಗೆ, ಮರಗೆಲಸ ಇತ್ಯಾದಿ ದೈಹಿಕ ಕೆಲಸಗಳು ವಕೀಲ ವೃತ್ತಿ, ವೈದ್ಯ ವೃತ್ತಿ, ಅಧ್ಯಾಪಕ ವೃತ್ತಿ, ಅಧ್ಯಾಪಕ ವೃತ್ತಿ–ಮುಂತಾದ ಬೌದ್ಧಿಕ ಉದ್ಯೋಗಗಳಿಗಿಂತ ಯಾವುದೇ ರೀತಿಯಲ್ಲಿ ಕೀಳಲ್ಲ - ಎಂಬುದು ಗಾಂಧೀಜಿ ಸದಾಕಾಲ ನೆನಪಿಸುತ್ತಿದ್ದ ಮಾತು.

" ಕೆಲಸ ಮಾಡುತ್ತಲೇ ನೂರು ವರ್ಷ ಬದುಕಲು ಇಚ್ಛಿಸಬೇಕು. ಕರ್ತವ್ಯ ಕರ್ಮಗಳಲ್ಲಿ ಶರೀರವನ್ನು ದುಡಿಸುವುದರ ವಿನಾ ಬೇರೆ ಮಾರ್ಗವೇ ಇಲ್ಲ. ಇಂಥ ಕರ್ಮಯೋಗಿಗಳಿಗೆ ಕರ್ಮಲೇಪವಿಲ್ಲ"ಎಂಬ ಈಶಾವಾಸ್ಯ ಉಪನಿಷತ್ತಿನ ಮಾತುಗಳನ್ನೂ ಇಲ್ಲಿ ನೆನಪಿಸಿಕೊಳ್ಳಬಹುದೇನೋ! ●

ಹರಿಲಾಲ್ ಗಾಂಧಿ ಕಥನ-ಎರಡು

– ಅನುವಾದ : ಜಗದೀಶ ಕೊಪ್ಪ

ಹರಿಲಾಲ್ ಜನಿಸಿದಾಗ ಮಹಾತ್ಮ ಗಾಂಧಿ ಮತ್ತು ಕಸ್ತೂರಬಾ ದಂಪತಿಗಳಿಗೆ ಕೇವಲ ಹತ್ತೊಂಬತ್ತು ವರ್ಷಗಳಾಗಿತ್ತು. ಇದಕ್ಕೂ ಮುನ್ನ ಕಸ್ತೂರಬಾ ಗೆ ಒಂದು ಮಗು ಜನಿಸಿ ಹುಟ್ಟಿದ ಮೂರು ದಿನಗಳಲ್ಲಿ ಅಸು ನೀಗಿತ್ತು. ಆದರೆ, ಅದು ಹೆಣ್ಣು ಅಥವಾ ಗಂಡು ಮಗು ಎಂಬುದು ಎಲ್ಲಿಯೂ ದಾಖಲಾಗಿಲ್ಲ. ಹಾಗಾಗಿ ಹರಿಲಾಲ್, ಗಾಂಧಿ ದಂಪತಿಗಳಿಗೆ ಮೊದಲನೆಯ ಪುತ್ರ. ಹರಿಲಾಲ್ ಅವರ ನಿಖರವಾದ ಜನ್ಮ ದಿನದ ದಾಖಲೆಗಳು ಎಲ್ಲಿಯೂ ನಮೂದಾಗಿಲ್ಲ. ಆದರೆ, ೧೮೮೮ ರ ಆಗಸ್ಟ್ ೧೦ ರಂದು ಇಂಗ್ಲೆಂಡಿಗೆ ಉನ್ನತ ಅಧ್ಯಯನಕ್ಕಾಗಿ ಗಾಂಧೀಜಿ ಪ್ರಯಾಣಿಸುವ ಮುನ್ನ ಹರಿಲಾಲ್ ಜನಿಸಿದ್ದರು. ರಾಜ್ ಕೋಟ್ ನಗರದಿಂದ ಗಾಂಧೀಜಿ ಮುಂಬೈ ಮಾರ್ಗವಾಗಿ ಇಂಗ್ಲೆಂಡಿಗೆ ಹೋಗುವಾಗ ಮಗುವಿಗೆ ಎರಡು ಅಥವಾ ಮೂರು ತಿಂಗಳಾಗಿತ್ತು.

೧೯೨೫ ರ ಜೂನ್ ೧೮ ರಂದು ಗಾಂಧೀಜಿಯವರು ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ತಮ್ಮ ಪುತ್ರನ ಬಗ್ಗೆ ಪ್ರಸ್ತಾಪಿಸುತ್ತಾ " ನನ್ನ ಪುತ್ರ ಹರಿಲಾಲ್ ಗೆ ಮುವತ್ತು ವರ್ಷ ತುಂಬಿತು" ಎಂದು ದಾಖಲಿಸಿರುವುದನ್ನು ಗಮನಿಸಿದರೆ, ಹರಿಲಾಲ್ ಗಾಂಧಿ ೧೮೮೮ ರ ಜೂನ್ ತಿಂಗಳಿನಲ್ಲಿ ಜನಿಸಿರಬೇಕು ಎಂದು ಊಹಿಸಬಹುದಾಗಿದೆ. ಹರಿಲಾಲ್ ರಾಜ್ ಕೋಟ್ ನಗರದ ಕಸ್ತೂರಬಾ ರವರ ತವರು ಮನೆಯಲ್ಲಿ ಜನಿಸಿದರು. ಗಾಂಧೀಜಿಯವರು ೧೮೮೮ ರಲ್ಲಿ ಇಂಗ್ಲೆಂಡಿಗೆ ತೆರಳಿ ಅಲ್ಲಿ ಬ್ಯಾರಿಸ್ಟರ್ ಪದವಿಯನ್ನು ಪಡೆದು ೧೮೯೧ ರ ಜುಲೈ ತಿಂಗಳಿನಲ್ಲಿ ಮುಂಬೈ ನಗರಕ್ಕೆ ಆಗಮಿಸಿದರು. ಗಾಂಧೀಜಿಯವರು ವಿದೇಶದಿಂದ ವಾಪಸ್ ಬರುವ ವೇಳೆಗೆ ಅವರ ತಾಯಿ ಪುತಲಿಬಾಯಿಯವರು ನಿಧನ ಹೊಂದಿದ್ದರು. ಹಡಗು ಮುಂಬೈ ಕಟ್ಟೆಯನ್ನು ತಲುಪಿದ ನಂತರವಷ್ಟೇ ಗಾಂಧೀಜಿ ಅವರಿಗೆ ತಾಯಿಯ ನಿಧನ ವಾರ್ತೆಯನ್ನು ತಿಳಿಸಲಾಯಿತು.

ಭಾರತಕ್ಕೆ ಬಂದ ನಂತರ ಗಾಂಧಿಯವರಿಗೆ ಸ್ವಾತಂತ್ರ್ಯ ಅಥವಾ ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಟ ಮಾಡಬೇಕೆಂಬ ಯಾವುದೇ ಪರಿಕಲ್ಪನೆ ಇರಲಿಲ್ಲ. ತಾನೊಬ್ಬ ಪ್ರಸಿದ್ಧ ನ್ಯಾಯವಾದಿಯಾಗಬೇಕೆಂದು ಅವರು ಕನಸು ಕಂಡಿದ್ದರು. ದಕ್ಷಿಣ ಆಫ್ರಿಕಾ ಮತ್ತು ಭಾರತದ ಜನತೆಯ ಅದೃಷ್ಟವೆಂಬಂತೆ ಅವರು ಗುಜರಾತಿನ ಕಾಥೆವಾಡದಲ್ಲಿ ಆರಂಭಿಸಿದ್ದ ತಮ್ಮ ವಕೀಲ ವೃತ್ತಿಯಲ್ಲಿ ಯಶಸ್ವಿಯಾಗಲಿಲ್ಲ. ಯಾವುದೇ ಕಕ್ಷಿದಾರರು ಸಿಗದ ಕಾರಣ ಅವರು ಹೆಚ್ಚಿನ ಸಮಯವನ್ನು ತಮ್ಮ ಪತ್ನಿ ಮತ್ತು ಮಕ್ಕಳ ಜೊತೆ ಕಳೆಯುತ್ತಿದ್ದರು. ಸ್ವತಂತ್ರವಾಗಿ ಕೌಟುಂಬಿಕ ನಿರ್ವಹಣೆ ಮಾಡುವುದು ದುಸ್ತರವಾಗಿ, ದುಡಿಯುವುದು ಅವರ ಪಾಲಿಗೆ ಅನಿವಾರ್ಯವಾಗಿತ್ತು. ಕಾಥೆವಾಡದಲ್ಲಿ ಸಾಧ್ಯವಾಗದ ಪ್ರಯುಕ್ತ ತಮ್ಮ ಕುಟುಂಬವನ್ನು ರಾಜ್‌ಕೋಟ್ ನಲ್ಲಿದ್ದ ಕಸ್ತೂರಬಾ ಅವರ ತವರು ಮನೆಗೆ ಕಳುಹಿಸಿ ಅದೃಷ್ಟ ಅರೆಸಿಕೊಂಡು ಅಂದಿನ ಬಾಂಬೆ ಹಾಗೂ ಈಗಿನ ಮುಂಬೈ ನಗರದತ್ತ ಹೊರಟರು.

ಮುಂಬೈ ನಗರದಲ್ಲಿಯೂ ಸಹ ಅವರ ಆಸೆ ಈಡೇರಲಿಲ್ಲ. ಅದೇ ವೇಳೆಗೆ ಗಾಂಧೀಜಿಯವರ ಊರಾದ ಪೋರ್ ಬಂದರಿನ ಮೆಮನ್ ಎಂಬ ವ್ಯಾಪಾರಿಯೊಬ್ಬರು ತಮ್ಮ ವಿದೇಶ ವ್ಯಾಪಾರದ ಕಾನೂನು ಸಲಹೆಗಾರರನ್ನಾಗಿ ಗಾಂಧೀಜಿಯವರನ್ನು ನೇಮಕ ಮಾಡಿಕೊಂಡು ಅವರನ್ನು ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಿಕೊಟ್ಟರು. ಆ ವೇಳೆಗಾಗಲೇ ಗಾಂಧೀಜಿಯವರಿಗೆ ಮಣಿಲಾಲ್ ಎಂಬ ಮತ್ತೊಬ್ಬ ಪುತ್ರನೂ ಜನಿಸಿದ್ದನು. ತಮ್ಮ ಕುಟುಂಬವನ್ನು ರಾಜ್‌ಕೋಟ್ ನ ಮಾವನ ಮನೆಯಲ್ಲೇ ಇರಿಸಿ ಗಾಂಧಿಯವರು ದಕ್ಷಿಣ ಅಫ್ರಿಕಾಕ್ಕೆ ತೆರಳಿದರು. ವಾಸ್ತವವಾಗಿ ಗಾಂಧೀಜಿಯವರನ್ನು ಮೆಮನ್ ವ್ಯಾಪಾರದ ಕೆಲವು ವಿವಾದಗಳನ್ನು ನ್ಯಾಯಾಲಯದಲ್ಲಿ ಬಗೆಹರಿಸಲು ಒಂದು ವರ್ಷದ ಅವಧಿಗೆ ಮಾತ್ರ ಕಳುಹಿಸಿದ್ದರು. ಆದರೆ, ಅವರು ದಕ್ಷಿಣ ಆಫ್ರಿಕಾಕ್ಕೆ ತೆರಳಿದ ನಂತರ; ಅವರ ಜೀವನದ ಪಥವಷ್ಟೇ ಅಲ್ಲದೆ, ಆಲೋಚನಾ ಕ್ರಮವೂ ಸಹ ಬದಲಾಯಿತು. ಅವರು ದಕ್ಷಿಣ ಆಫ್ರಿಕಾದಿಂದ ತಮ್ಮ ಪತ್ನಿ ಕಸ್ತೂರಬಾ ಗೆ ಬರೆದಿರುವ ಪತ್ರಗಳಲ್ಲಿ ದಕ್ಷಿಣ ಆಫ್ರಿಕಾದ ತಮ್ಮ ಅನುಭವಗಳನ್ನು ಹೊರತು ಪಡಿಸಿದರೆ ಮಕ್ಕಳ ಕುರಿತಾಗಿ ಯಾವುದೇ ವಿಷಯಗಳನ್ನು ಪ್ರಸ್ತಾಪ ಮಾಡಿಲ್ಲ.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ದೀರ್ಘ ಕಾಲದವರೆಗೆ ನೆಲೆ ನಿಲ್ಲಲು ನಿರ್ಧರಿಸಿದ ನಂತರ ತಮ್ಮ ಕುಟುಂಬವನ್ನು ಅಲ್ಲಿಗೆ ಕರೆಸಿಕೊಳ್ಳಲು ನಿಶ್ಚಯಿಸಿದರು. ಅವರಿಗೆ ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿನ ಕರಿಯರೂ ಸೇರಿದಂತೆ ಭಾರತದ ಮೂಲದ ಅನೇಕ ನಾಗರೀಕರು ಕಕ್ಷಿದಾರರಾದ್ದರಿಂದ ಅವರ ಕಾನೂನು ಸೇವಾ ವೃತ್ತಿಯಲ್ಲಿ ಸುಧಾರಣೆ ಕಂಡು ಬಂದ ಫಲವಾಗಿ ನೆಮ್ಮದಿಯಿಂದ ಕುಟುಂಬವನ್ನು ಸಲಹಬಹುದು ಎಂಬ ವಿಶ್ವಾಸ ಅವರಲ್ಲಿ ಮೂಡಿತು.

ಐದು ತಿಂಗಳ ನಂತರ ಅವರು ತಮ್ಮ ಪತ್ನಿ, ಇಬ್ಬರು ಪುತ್ರರು (ಹರಿಲಾಲ್ ಮತ್ತು ಮಣಿಲಾಲ್) ಹಾಗೂ ತಮ್ಮ ಸಹೋದರ ಸಂಬಂಧಿ ಗೋಕುಲ್ ದಾಸ್ ಅವರನ್ನು ದಕ್ಷಿಣ ಆಫ್ರಿಕಾಕ್ಕೆ ಕರೆಸಿಕೊಂಡರು. ಆಫ್ರಿಕಾದಲ್ಲಿ ಕಾನೂನು ಸಲಹೆಗಾರರಾಗಿದ್ದ ಗಾಂಧೀಜಿಯವರ ವೇಷಭೂಷಣಗಳಲ್ಲಿ ಆಧುನಿಕತೆಯ ಛಾಯೆ ಎದ್ದು ಕಾಣುತ್ತಿತ್ತು. ಸದಾ ಸೂಟುಧಾರಿಯಾಗಿದ್ದ ಅವರು ತಮ್ಮ ಮಕ್ಕಳಿಗೆ ಕೋಟು, ಪ್ಯಾಂಟ್ ಮತ್ತು ಶೂ ಗಳನ್ನು ತೆಗೆದುಕೊಟ್ಟಿದ್ದರು.

ಗಾಂಧೀಜಿಯವರು ಭಾರತಕ್ಕೆ ಬಂದಿದ್ದ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವಾಸವಾಗಿರುವ ಬಿಳಿಯರು ಅಲ್ಲಿನ ಮೂಲನಿವಾಸಿಗಳು ಸೇರಿದಂತೆ, ಭಾರತೀಯರನ್ನು ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿರುವ ಬಗ್ಗೆ ಆತ್ಮೀಯರ ಜೊತೆ ಹೇಳಿಕೊಂಡಿದ್ದರು. ಜೊತೆಗೆ ತಾವು ಒಮ್ಮೆ ರೈಲಿನಲ್ಲಿ ಪ್ರಯಾಣಿಸುವಾಗ ಅಲ್ಲಿ ಜಾರಿಯಲ್ಲಿದ್ದ ವರ್ಣ ಬೇಧ ನೀತಿಯಿಂದಾಗಿ ಅಪಮಾನ ಮತ್ತು ನೋವು ಎರಡನ್ನೂ ಸ್ವತಃ ಅನುಭವಿಸಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರು ವರ್ಣ ಬೇಧ ನೀತಿಯ ವಿರುದ್ಧದ ಹೋರಾಟದಿಂದಾಗಿ ಜನಪ್ರಿಯರಾದುದಲ್ಲದೆ, ಕರಿಯರ ಮತ್ತು ಭಾರತೀಯರ ಪಾಲಿಗೆ ಆಪತ್ಬಾಂಧವರಾಗಿ ವಕೀಲಿ ವೃತ್ತಿಯಲ್ಲಿ ಯಶಸ್ಸು ಸಾಧಿಸಿದರು. ಇದೇ ವೇಳೆಯಲ್ಲಿ ಗಾಂಧಿ ಮತ್ತು ಕಸ್ತೂರಬಾ ದಂಪತಿಗಳಿಗೆ ದಕ್ಷಿಣ ಆಫ್ರಿಕಾದಲ್ಲಿ ರಾಮದಾಸ್ ಮತ್ತು ದೇವದಾಸ್ ಎಂಬ ಮತ್ತಿಬ್ಬರು ಪುತ್ರರು ಜನಿಸಿದರು. ೧೯೦೧ ರ ವೇಳೆಗೆ ಗಾಂಧೀ-ಜಿಯವರು ಭಾರತಕ್ಕೆ ಹಿಂತಿರುಗಲು ನಿರ್ಧರಿಸಿದರು. ಅದರಂತೆ ೧೯೦೧ ರ ಅಕ್ಟೋಬರ್ ೧೯ ರಂದು ಆಫ್ರಿಕಾದ ಡರ್ಬಾನ್ ನಗರವನ್ನು ತೊರೆದು ತನ್ನ ಕುಟುಂಬದೊಂದಿಗೆ ಭಾರತಕ್ಕೆ ವಾಪಸ್ಸಾದರು.

ದಕ್ಷಿಣ ಆಫ್ರಿಕಾದಲ್ಲಿದ್ದ ಒಂದು ದಶಕದ ಅವಧಿಯಲ್ಲಿ ಅವರು ಸಲ್ಲಿಸಿದ ಅನುಪಮ ಸೇವೆಗಾಗಿ ಅಲ್ಲಿನ ಭಾರತೀಯರು ಗಾಂಧೀಜಿ ಕುಟುಂಬಕ್ಕೆ ಗೌರವ ನಿಧಿಯನ್ನು ಒಳಗೊಂಡಂತೆ

ಒಂದಿಷ್ಟು ಚಿನ್ನಾಭರಣಗಳನ್ನು ಉಡುಗೊರೆಯಾಗಿ ನೀಡಿದರು. ಆದರೆ, ಗಾಂಧೀಜಿಯವರು ಉಡುಗೊರೆಯನ್ನು ತೆಗೆದುಕೊಳ್ಳಲು ನಿರಾಕರಿಸಿ ಅವುಗಳನ್ನು ವಾಪಸ್ ಮಾಡುವ ಸಂದರ್ಭದಲ್ಲಿ ಕಸ್ತೂರಬಾ ಮತ್ತು ಗಾಂಧೀಜಿ ನಡುವೆ ದೊಡ್ಡ ವಾಗ್ಯುದ್ಧ ನಡೆದು ಹೋಯಿತು. ಗಾಂಧೀ-ಜಿಯವರಿಗೆ ಕಾಥೆವಾಡ ಮತ್ತು ಬಾಂಬೆ ನಗರಗಳಲ್ಲಿ ಯಾವುದೇ ಕಕ್ಷಿದಾರರು ದೊರಕದೆ ಖಾಲಿ ಕೈಲಿ ಕುಳಿತಿದ್ದ ಸಂದರ್ಭದಲ್ಲಿ ಕಸ್ತೂರಬಾ ಅವರು ತಮ್ಮ ಮೈಮೇಲಿನ ಆಭರಣಗಳನ್ನು ಕಳಚಿಕೊಟ್ಟು ಕುಟುಂಬ ನಿರ್ವಹಣೆಗೆ ಕೈಜೋಡಿಸಿದ್ದರು. ಮಕ್ಕಳ ವಿದ್ಯಾಭ್ಯಾಸ ಮತ್ತು ಭವಿಷ್ಯದ ದೃಷ್ಟಿಯಿಂದ ಗೌರವ ನಿಧಿಯನ್ನು ಸ್ವೀಕರಿಸೋಣ ಎಂಬ ಕಸ್ತೂರಬಾ ನಿಲುವಿಗೆ ಗಾಂಧೀಜಿ ಸಹಮತ ವ್ಯಕ್ತಪಡಿಸಲಿಲ್ಲ. ಅಂತಿಮವಾಗಿ ಗಾಂಧೀಜಿಯವರ ಹಠಮಾರಿತನ ಗೆದ್ದಿತು. ಆಶ್ಚರ್ಯಕರ ಸಂಗತಿಯೆಂದರೆ, ತಂದೆಯ ಧೋರಣೆಗೆ ಹರಿಲಾಲ್ ಮತ್ತು ಮಣಿಲಾಲ್ ಬೆಂಬಲ ವ್ಯಕ್ತಪಡಿಸಿದರು. ರಾಮದಾಸ್ ಮತ್ತು ದೇವದಾಸ್ ಚಿಕ್ಕ ಮಕ್ಕಳಾದ್ದರಿಂದ ತಮ್ಮ ಕುಟುಂಬದಲ್ಲಿ ನಡೆಯುತ್ತಿದ್ದ ಘಟನೆಗಳಿಗೆ ಮೌನವಾಗಿ ಸಾಕ್ಷಿಯಾದರು.

ಭಾರತಕ್ಕೆ ಹಿಂತಿರುಗಿ ಬಂದ ನಂತರ ಗಾಂಧೀಜಿಯವರು ತಮ್ಮ ಕುಟುಂಬದೊಂದಿಗೆ ಬಾಂಬೆ ನಗರದಲ್ಲಿ ನೆಲೆ ನಿಂತು ವಕೀಲಿ ವೃತ್ತಿಯಲ್ಲಿ ನಿರತರಾದರು. ಮಕ್ಕಳು ಬೆಳೆಯುತ್ತಿದ್ದಂತೆ ಅವರ ಶಿಕ್ಷಣ ಕುರಿತಂತೆ ಗಾಂಧಿಯವರಲ್ಲಿ ಜಿಜ್ಞಾಸೆ ಆರಂಭವಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರಲ್ಲದ ಮಕ್ಕಳಿಗೆ ಶಾಲೆಗಳಲ್ಲಿ ಪ್ರವೇಶ ನಿರಾಕರಿಸಲಾಗುತ್ತಿತ್ತು. ಗಾಂಧೀಜಿಯಂತಹ ಪ್ರತಿಷ್ಠಿತ ವ್ಯಕ್ತಿಗಳ ಮಕ್ಕಳಿಗೆ ಪ್ರವೇಶ ದೊರಕುತ್ತಿತ್ತಾದರೂ, ಅಂತಹ ಮಕ್ಕಳು ಅಸ್ಪೃಶ್ಯರಂತೆ ಉಳಿದ ಮಕ್ಕಳಿಂದ ದೂರವಾಗಿ ಉಳಿದು ಪಾಠ ಕಲಿಯುವ ವಾತಾವರಣವಿತ್ತು. ಈ ಕಾರಣ-ಕ್ಕಾಗಿ ಗಾಂಧೀಜಿಯವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ತಾವೇ ಸ್ವತಃ ಮನೆಯಲ್ಲಿ ಪಾಠ ಹೇಳಲು ನಿರ್ಧರಿಸಿದ್ದರು. ಆದರೆ ಅವರ ಕಾರ್ಯಭಾರದ ಒತ್ತಡದಿಂದ ಸಾಧ್ಯವಾಗುತ್ತಿರಲಿಲ್ಲ. ಅಲ್ಲಿದ್ದ ಬಹುತೇಕ ಭಾರತೀಯರು ವ್ಯಾಪಾರಿಗಳು ಇಲ್ಲವೆ, ಗುಮಾಸ್ತರಾಗಿದ್ದ ಕಾರಣ ಮಕ್ಕಳಿಗೆ ಶಿಕ್ಷಣ ನೀಡುವಂತಹ ಶಿಕ್ಷಕರು ದೊರಕಲಿಲ್ಲ. ಪತ್ನಿ ಕಸ್ತೂರಬಾ ಅನಕ್ಷರಸ್ಥೆಯಾಗಿದ್ದರು. (ನಂತರದ ದಿನಗಳಲ್ಲಿ ಓದು,ಬರಹ ಕಲಿತರು) ಇದೇ ಪರಿಸ್ಥಿತಿ ಗಾಂಧೀಜಿಯವರಿಗೆ ಭಾರತಕ್ಕೆ ಬಂದ ನಂತರವೂ ಎದುರಾಯಿತು. ಈ ಸಂದರ್ಭದಲ್ಲಿ ತನ್ನ ಸೋದರ ಸಂಬಂಧಿ ಗೋಕುಲ್ ದಾಸ್ ಹಾಗೂ ಹಿರಿಯ ಪುತ್ರ ಹರಿಲಾಲ್ ಇಬ್ಬರನ್ನು ಬನಾರಸ್ ಮತ್ತು ಗೊಂಡಾಲ್ ವಸತಿ ಶಾಲೆಗೆ ಹಾಕಿದರು. ಹರಿಲಾಲ್ ವ್ಯಾಸಂಗ ಮಾಡುತ್ತಿದ್ದ ವಸತಿ ಶಾಲೆಯ ಗುಣಮಟ್ಟದ ಬಗ್ಗೆ ಅತೃಪ್ತಗೊಂಡ ಗಾಂಧೀಜಿಯವರು ತಮ್ಮ ಪುತ್ರನನ್ನ ವಾಪಸ್ ಮುಂಬೈಗೆ ಕರೆತಂದರು. ಅದೇ ವೇಳೆಗೆ ಮುಂಬೈ ನಗರಕ್ಕೆ ಆಗಮಿಸಿದ ಅವರ ಸಂಬಂಧಿ ಛಗನ್ ಲಾಲ್ ಗಾಂಧಿ ಕುಟುಂಬದೊಂದಿಗೆ ವಾಸವಾಗಿದ್ದುಕೊಂಡು, ಅವರ ಎಲ್ಲಾ ಪುತ್ರರಿಗೂ ಪಾಠ ಹೇಳಿಕೊಡುತ್ತಿದ್ದರು.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿ ಬರುವಾಗ ಅವಶ್ಯಕತೆ ಬಿದ್ದರೆ, ನಿಮ್ಮ ಸೇವೆಗಾಗಿ ಮರಳಿ ಬರಲು ಸಿದ್ಧ ಎಂಬ ಆಶ್ವಾಸನೆಯನ್ನು ಅಲ್ಲಿನ ಭಾರತೀಯ-ರಿಗೆ ನೀಡಿಬಂದಿದ್ದರು. ಅದರಂತೆ ಅವರಿಗೆ ಒಂದಿಷ್ಟು ಪ್ರಯಾಣದ ವೆಚ್ಚದ ಹಣದ ಜೊತೆಗೆ ಕೂಡಲೇ ಬರಬೇಕೆಂಬ ಟೆಲಿಗ್ರಾಂ ಬಂದಿತು. ಗಾಂಧೀಜಿಯವರು ೧೯೦೨ ರ ನವಂಬರ್ ತಿಂಗಳಿನಲ್ಲಿ ಪುನಃ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಗಾಂಧೀಜಿಯವರ ಕುಟುಂಬವು ಮಕ್ಕಳ ವಿದ್ಯಾಭ್ಯಾಸದ ಕಾರಣಗಳಿಂದ ಮುಂಬೈ ನಗರದಲ್ಲೇ ವಾಸವಾಗಿತ್ತು. ಅಂತಿಮವಾಗಿ ಗಾಂಧೀ-ಜಿಯವರು ಕಸ್ತೂರಬಾ ಮತ್ತು ಮಕ್ಕಳನ್ನು ದಕ್ಷಿಣ ಆಫ್ರಿಕಾಕ್ಕೆ ಕರೆಸಿಕೊಳ್ಳಲು ನಿರ್ಧರಿಸಿದರು. ಹರಿಲಾಲ್‌ನ ಶಿಕ್ಷಣದ ಭವಿಷ್ಯದ ದೃಷ್ಟಿಯಿಂದ ಆತನನ್ನು ಮುಂಬೈ ನಲ್ಲಿ ಉಳಿಸಿ, ಕಸ್ತೂರಬಾ

ಮತ್ತು ಮಕ್ಕಳಾದ ಮಣಿಲಾಲ್, ರಾಮದಾಸ್ ಹಾಗೂ ದೇವದಾಸ್ ಇವರನ್ನು ೧೯೦೪ ರಲ್ಲಿ ದಕ್ಷಿಣ ಆಫ್ರಿಕಾ ದೇಶಕ್ಕೆ ಕರೆಸಿಕೊಂಡರು. ಜೋಹಾನ್ಸ್ ಬರ್ಗ್ ನಗರದಲ್ಲಿ ಮನೆ ಮಾಡಿದ ಅವರು ತಮ್ಮ ವಕೀಲಿ ವೃತ್ತಿ ಹಾಗೂ ಕಪ್ಪು ವರ್ಣಿಯರ ಪರ ಹೋರಾಟದ ನಡುವೆಯೂ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು.(ಮುಂಬೈ ನಗರದಲ್ಲಿ ಗಾಂಧೀಜಿಯವರ ಹಿರಿಯ ಸಹೋದರ ಲಕ್ಷ್ಮಿದಾಸ್ ಅವರ ಗೆಳೆಯರಾಗಿದ್ದ ಡಾ.ಪ್ರೇಮ್ ಜೀವನದಾಸ್ ಅವರಿಗೆ ಆತ್ಮೀಯರಾಗಿದ್ದ ರೇವಾಶಂಕರ್ ಜಗ್‌ಜೀವನ್ ಜವೇರಿ ಅವರಿದ್ದ ಮಾಣಿಕ್ ಭವನ್ ಕಟ್ಟಡದಲ್ಲಿ ತಮ್ಮ ಪುತ್ರ ಹರಿಲಾಲ್‌ನನ್ನು ಇರಿಸಿ, ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದ್ದರು.)

ಇತ್ತ ಹರಿಲಾಲ್ ಮುಂಬೈ ನಗರದಲ್ಲಿದ್ದುಕೊಂಡು ತನ್ನ ಶಿಕ್ಷಣವನ್ನು ಮುಂದುವರಿಸಿದ್ದರು. ಗುಜರಾತಿನ ರಾಜ್ ಕೋಟ್ ನಗರದಲ್ಲಿ ಬನಿಯಾ ಸಮುದಾಯಕ್ಕೆ ಸೇರಿದ ಎರಡು ಕುಟುಂಬಗಳು ಪ್ರಸಿದ್ಧವಾಗಿದ್ದವು. ಅವುಗಳಲ್ಲಿ ಒಂದು ಮಹಾತ್ಮ ಗಾಂಧಿಯವರ ಕುಟುಂಬವಾದರೆ, ಮತ್ತೊಂದು ವೋರಾ ಕುಟುಂಬವಾಗಿತ್ತು. ಹರಿದಾಸ್ ಭಾಯ್ ಎಂದು ಪ್ರಸಿದ್ಧರಾಗಿದ್ದ ಹರಿದಾಸ್ ವೆಂಕಟಚಂದ್ ವೋರಾ ಅವರು ರಾಜ್ ಕೋಟ್ ನಗರದಲ್ಲಿ ಸಾಮಾಜಿಕ ಸುಧಾರಕರಾಗಿ ಹೆಸರುವಾಸಿಯಾಗಿದ್ದರು. ಗಾಂಧಿಯವರು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ತೆರಳಿದ ಸಂದರ್ಭದಲ್ಲಿ ಅವರನ್ನು ಜಾತಿ ಭ್ರಷ್ಟರೆಂದು ಘೋಷಿಸಿ ಬಹಿಷ್ಕಾರ ಹಾಕಿದ್ದ ಸಂದರ್ಭದಲ್ಲಿ ತಮ್ಮ ಸಮುದಾಯದ ನಿರ್ಧಾರವನ್ನು ಪ್ರಬಲವಾಗಿ ವಿರೋಧಿಸಿದ್ದರು. ಅಷ್ಟೇ ಅಲ್ಲದೆ ಗಾಂಧೀಜಿ ಶಿಕ್ಷಣ ಮುಗಿಸಿ ಅವರು ವಿದೇಶದಿಂದ ವಾಪಸ್ ಬಂದ ಸಂದರ್ಭದಲ್ಲಿ ಅವರನ್ನು ತಮ್ಮ ಪುತ್ರ ಛಗನ್ ಲಾಲ್ ಜೊತೆಗೂಡಿ ವಿಶೇಷ ಗೌರವದೊಂದಿಗೆ ಬರಮಾಡಿಕೊಂಡಿದ್ದರಲ್ಲದೆ, ಶುದ್ಧೀಕರಣದೊಂದಿಗೆ ಅವರನ್ನು ಪುನಃ ಬನಿಯಾ ಸಮುದಾಯಕ್ಕೆ ಸೇರಿಸುವಲ್ಲಿ ಯಶಸ್ವಿಯಾಗಿದ್ದರು. ಈ ಕಾರಣದಿಂದಾಗಿ ಹರಿದಾಸ್ ಭಾಯ್ ಮತ್ತು ಗಾಂಧೀಜಿ ನಡುವೆ ಅನ್ಯೋನ್ಯತೆ ಬೆಳೆದಿತ್ತು. ತಮ್ಮ ಪುತ್ರಿಯಾದ ಗುಲಾಬ್ ಬೆಹನ್ ಎಂಬಾಕೆಯನ್ನು ಗಾಂಧಿ ಪುತ್ರ ಹರಿಲಾಲ್ ಗೆ ಏಕೆ ವಿವಾಹ ಮಾಡಬಾರದು? ಎಂಬ ಚರ್ಚೆ ಅವರ ಕುಟುಂಬದಲ್ಲಿ ಆರಂಭವಾಯಿತು. ಈ ಪ್ರಸ್ತಾಪವನ್ನು ಹರಿದಾಸ್ ಅವರು ಗಾಂಧಿಯವರ ಹಿರಿಯ ಸಹೋದರ ಲಕ್ಷ್ಮಿದಾಸ್ ಅವರಲ್ಲಿ ಪ್ರಸ್ತಾಪ ಮಾಡಿದರು. ಈ ಪ್ರಸ್ತಾಪಕ್ಕೆ ಸಹಮತ ವ್ಯಕ್ತಪಡಿಸಿದ ಲಕ್ಷ್ಮಿದಾಸ್ ಅವರು ತಮ್ಮ ಸಹೋದರನ ಅಭಿಪ್ರಾಯ ಕೇಳಿ ಗಾಂಧೀಜಿಯವರಿಗೆ ಪತ್ರ ಬರೆದರು. ನನ್ನ ತೊಡೆಯ ಮೇಲೆ ಆಡಿ ಬೆಳೆದಿದ್ದ ಗುಲಾಬ್ ಬೆಹನ್ ನನ್ನ ಕುಟುಂಬದ ಸೊಸೆಯಾಗುವುದು ಸಂತೋಷದ ವಿಷಯ ಎಂದು ಗಾಂಧೀಜಿಯವರು ಸಮ್ಮತಿ ಸೂಚಿಸಿದರು. ನಂತರ ಹರಿಲಾಲ್ ಮತ್ತು ಗುಲಾಬ್ ಬೆಹನ್ ರ ವಿವಾಹ ನಿಶ್ಚಿತಾರ್ಥವೂ ಕೂಡ ಗಾಂಧೀಜಿಯವರ ಅನುಪಸ್ಥಿತಿಯಲ್ಲಿ ಅವರ ಸಹೋದರನ ನೇತೃತ್ವದಲ್ಲಿ ನಡೆದು ಹೋಯಿತು.

೧೯೦೩ ರ ಏಪ್ರಿಲ್ ತಿಂಗಳ ಬೇಸಿಗೆ ರಜೆಯಲ್ಲಿ ಹರಿಲಾಲ್ ರಾಜ್‌ಕೋಟ್ ನಗರದ ತನ್ನ ಸೋದರತ್ತೆಯ ಮನೆಗೆ (ಗಾಂಧೀಜಿಯ ಸಹೋದರಿ ರಲಿಯಾತ್ ಬೆಹನ್) ಹೋದ ಸಂದರ್ಭದಲ್ಲಿ ಅನಾರೋಗ್ಯಕ್ಕೆ ತುತ್ತಾದರು. ಪುರುಷರಿಲ್ಲದ ಆ ಮನೆಯಲ್ಲಿ ಹರಿಲಾಲ್‌ನನ್ನು ಶುಶ್ರೂಶೆ ಮಾಡುವುದು ಕಷ್ಟ ಎಂದು ಅರಿತ ಹರಿಲಾಲ್‌ನ ಭಾವಿ ಮಾವನವರಾದ ಹರಿದಾಸ್ ಭಾಯ್ ಅವರು ಹರಿಲಾಲ್ ನನ್ನು ತಮ್ಮ ಮನೆಗೆ ಕರೆದೊಯ್ದು ಎರಡು ತಿಂಗಳ ಕಾಲ ಸುಶ್ರೂಶೆ ಮಾಡಿದರು. ಈ ವಿಷಯ ತಿಳಿದ ಗಾಂಧೀಜಿಯವರು ಹರಿದಾಸ್ ಗೆ ಕೃತಜ್ಞತೆಯ ಪತ್ರವನ್ನು ಸಹ ಬರೆದರು.

ಗಾಂಧೀಜಿಯವರು ತಮ್ಮ ಪುತ್ರ ಹರಿಲಾಲ್‌ನನ್ನು ಒಂಟಿ ಬಿಡುವುದು ಬೇಡ ಎಂದು

ನಿರ್ಧರಿಸಿ, ದಕ್ಷಿಣ ಆಫ್ರಿಕಾಕ್ಕೆ ಬರಬೇಕೆಂದು ಒತ್ತಾಯಿಸಿದಾಗ, ಗುಲಾಬ್ ಬೆಹನ್‌ರವರ ತಂದೆ ಹರಿದಾಸ್ ಒತ್ತಡಕ್ಕೆ ಒಳಗಾದರು. ಏಕೆಂದರೆ, ತಮ್ಮ ಭಾವಿ ಅಳಿಯ ಹರಿಲಾಲ್ ದಕ್ಷಿಣ ಆಫ್ರಿಕಾಕ್ಕೆ ತೆರಳಿದರೆ, ವಾಪಸ್ ಬರುವುದು ಐದು ವರ್ಷಗಳ ನಂತರ ಎಂಬುದು ತಿಳಿದಿತ್ತು. ಅಲ್ಲಿಯವರೆಗೆ ಬೆಳೆದ ಹೆಣ್ಣು ಮಗಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಕಷ್ಟ ಎಂದು ಭಾವಿಸಿದ ಅವರು,ಗಾಂಧೀಜಿಯವರ ಸಹೋದರ ಲಕ್ಷ್ಮಿದಾಸ್ ಅವರನ್ನು ಒತ್ತಾಯಿಸಿ ವಿವಾಹ ನೆರವೇ-ರಿಸಿದರು. ಹರಿಲಾಲ್ ಗೆ ವಿವಾಹವಾದಾಗ ಕೇವಲ ಹದಿನಾರು ವರ್ಷವಾಗಿತ್ತು. ಈ ಕಾರಣ-ಕ್ಕೆ ಗಾಂಧೀಜಿಯವರು ತಮ್ಮ ಪುತ್ರನ ಬಾಲ್ಯ ವಿವಾಹವನ್ನು ಪ್ರಬಲವಾಗಿ ವಿರೋಧಿಸಿದ್ದರು. ಆನಂತರ ತಮ್ಮ ಕುಟುಂಬ ಹಾಗೂ ಹರಿದಾಸ್ ಸ್ನೇಹದ ಕಾರಣಕ್ಕೆ ಒಲ್ಲದ ಮನಸ್ಸಿನಿಂದ ಒಪ್ಪಿಗೆ ಸೂಚಿಸಿದ ಫಲವಾಗಿ ಗಾಂಧಿಯವರ ಕುಟುಂಬದ ಸದಸ್ಯರ ಅನುಪಸ್ಥಿತಿಯಲ್ಲಿ ೧೯೦೭ ಮೇ ೨ ರಂದು ಹರಿಲಾಲ್ ಮತ್ತು ಗುಲಾಬ್ ಬೆಹನ್ ರ ವಿವಾಹ ನೆರವೇರಿತು. ●

–ಮುಂದುವರೆಯುವುದು

ಸಾಹಿತಿಗಳು, ವಿದ್ವಾಂಸರೂ, ಸಜ್ಜನರೂ ಹಾಗೂ
ಜನಪದ ಸೇವಾ ಟ್ರಸ್ಟಿನ ಒಡನಾಡಿಗಳೂ ಆಗಿದ್ದ ಹಿರಿಯ ಚೇತನ
ಡಾ.ಪ್ರಭುಶಂಕರ ಅವರ ನಿಧನಕ್ಕೆ ಜನಪದ ವಿಚಾರ ಬಳಗ
ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಗ್ರಾಮೀಣ ಆಂದೋಲನ ಏಕೆ? - ೧

ಗಾಂಧಿ ಆರ್ಥಿಕ ತಜ್ಞ ಜೆ.ಸಿ ಕುಮಾರಪ್ಪನವರು ೧೯೩೬ ರಲ್ಲಿ ಬರೆದ ಪ್ರಮುಖ ಪುಸ್ತಕ 'ವೈ ದಿ ವಿಲೇಜ್ ಮೂವ್‌ಮೆಂಟ್' ಅದರ ಭಾವಾನುವಾದ 'ಗ್ರಾಮೀಣ ಆಂದೋಲನ ಏಕೆ ?' ಜನಪದ ವಿಚಾರಕ್ಕಾಗಿ ಶ್ರೀ ಕೆ.ವೆಂಕಟರಾಜು ಅನುವಾದಿಸುತ್ತಿದ್ದಾರೆ.

ಮೊದಲ ಆವೃತಿಗೆ ಮುನ್ನುಡಿ

ಶೋಷಣೆಯಿಲ್ಲದ ವ್ಯವಸ್ಥೆ ತರುವುದರ ಮೂಲಕ ಮಾತ್ರ ಗ್ರಾಮಗಳ ಪುನರುಜ್ಜೀವನ ಸಾಧ್ಯ. ಸ್ಪರ್ಧೆ ಮತ್ತು ಮಾರುಕಟ್ಟೆಯ ಸಮಸ್ಯೆಗಳು ಪ್ರವೇಶಿಸುವ ಕಾರಣ, ಕೇಂದ್ರಿಕೃತ ಕೈಗಾರಿಕೆಗಳು ನೇರವಾಗಿಯೋ - ಪರೋಕ್ಷವಾಗಿಯೋ ಗ್ರಾಮೀಣ ಜನರ ಶೋಷಣೆಯನ್ನು ಮಾಡುತ್ತವೆ. ಆದುದರಿಂದ ನಾವು ಗ್ರಾಮಗಳನ್ನು ತನ್ನಷ್ಟಕ್ಕೆ ತಾನೇ ಪರಿಪೂರ್ಣವಾದ ಹಾಗೂ ಆಯಾ ಗ್ರಾಮಗಳಿಗೆ ಉಪಯೋಗವಾಗುವಂತಹ ಪದಾರ್ಥ ಉತ್ಪಾದಿಸುವ ಘಟಕಗಳನ್ನಾಗಿಸಬೇಕು. ಗ್ರಾಮೀಣ ಕೈಗಾರಿಕೆಗಳಲ್ಲಿ ಈ ಗುಣ ಇರುವಂತೆ ನಾವು ನಿರ್ವಹಿಸಿದಲ್ಲಿ, ಗ್ರಾಮಗಳು ಯಂತ್ರಗಳು ಮತ್ತು ಉಪಕರಣಗಳನ್ನು ಹೊಂದುವ ಸಾಮರ್ಥ್ಯ ಪಡೆದರೂ, ಬಳಕೆಮಾಡಿಕೊಂಡರೂ ತೊಂದರೆಯಾಗುವುದಿಲ್ಲ. ಆದರೆ ಅವು ಇನ್ನೊಬ್ಬರನ್ನು ಶೋಷಿಸುವ ಸಾಧನವನ್ನಾಗಿ ಬಳಸಬಾರದು.

ಈ ಪುಸ್ತಕ ಜನರ ಅಗತ್ಯವನ್ನು ಪೂರೈಸಿದೆ. ಈ ಆಂದೋಲನದ ಅಗತ್ಯ ಮತ್ತು ಸಾಧ್ಯತೆಯ ಹಾದಿಯಲ್ಲಿ ಬರಬಹುದಾದ ಎಲ್ಲಾ ಸಂದೇಹಗಳಿಗೆ ಪ್ರೊ. ಜೆ.ಸಿ.ಕುಮಾರಪ್ಪ ಇಲ್ಲಿ ಉತ್ತರಿಸಿದ್ದಾರೆ . ಗ್ರಾಮಗಳನ್ನು ಪ್ರೀತಿಸುವ ಎಲ್ಲರೂ ಈ ಪುಟ್ಟ ಪುಸ್ತಕವನ್ನು ಇಷ್ಟ ಪಡದೇ ಇರಲಾರರು. ಈ ಬಗ್ಗೆ ಅನುಮಾನ ಇಟ್ಟು ಕೊಂಡವರ ಅನುಮಾನ ಪರಿಹಾರವಾಗದೇ ಇರುವುದಿಲ್ಲ.

೨೨.೯.೧೯೩೬ ಮೊ.ಕ. ಗಾಂಧಿ

ಮೂರನೇ ಅವೃತಿಗೆ ಮುನ್ನುಡಿ

'ವೈ ದಿ ವಿಲೇಜ್ ಮೂವ್‌ಮೆಂಟ್' ಪುಸ್ತಕದ ಮೂರನೇ ಆವೃತಿ ಪ್ರಕಾಶಗೊಳ್ಳುತ್ತಿರುವುದು ಶುಭ ಸೂಚನೆಯಾಗಿದೆ. ಈ ಆಂದೋಲನದ ಅಗತ್ಯ ಮತ್ತು ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ಎದ್ದಿರುವ ಬಹುಶ: ಎಲ್ಲಾ ಪ್ರಶ್ನೆಗಳಿಗೂ ಪ್ರೊ. ಜೆ.ಸಿ. ಕುಮಾರಪ್ಪನವರ ಬೇಕೇ ಬೇಕಾದ ಉತ್ತರವನ್ನು ಈ ಪುಸ್ತಕ ನೀಡಿದೆ. ಗ್ರಾಮಗಳನ್ನು ಪ್ರೀತಿಸುವ ಯಾರೇ ಆಗಲಿ ಈ ಪುಸ್ತಿಕೆಯನ್ನು ಹೊಂದದೇ ಇರಲು ಸಾಧ್ಯವಿಲ್ಲ.

ಈ ಆಂದೋಲನದ ಸಂಶಯಸ್ತರ ಎಲ್ಲ ಸಂಶಯಗಳನ್ನು ಈ ಪುಸ್ತಕ ದೂರಮಾಡುತ್ತದೆ. ಗ್ರಾಮಗಳನ್ನು ನಾಶಮಾಡಿ ಭಾರತದಲ್ಲಿ ಹಲವು ದೊಡ್ಡ ನಗರಗಳನ್ನು ಸೃಷ್ಟಿಸಿ, ಅಲ್ಲಿ ಕೇಂದ್ರಿಕೃತವಾದ

ಕೈಗಾರಿಕೆಗಳು ಸ್ಥಾಪನೆಯಾದಲ್ಲಿ ಎಲ್ಲರೂ ಸುಭಿಕ್ಷೆ ಹೊಂದುತ್ತಾರೆ ಎಂಬ ಚಿಂತನೆಗೆ ಈಗಾಗಲೇ ಮಾರು ಹೋಗಿರುವವರಿಗೆ ಈ ಪುಸ್ತಕವು ಅನುಪಯುಕ್ತವಾದುದು. ಅದೃಷ್ಟವಶಾತ್ ಆ ವಿನಾಶದ ಚಿಂತನೆಗೆ ಮಾರುಹೋಗಿರುವವರು ಇನ್ನೂ ಕಡಿಮೆ ಜನರಿದ್ದಾರೆ. ವೈ ದಿ ವಿಲೇಜ್ ಮೂಮೆಂಟ್ ನಿರಾಶಾಭಾವ ಎಲ್ಲ ಕಡೆಗೆ ಪಸರಿಸುವ ಮುಂಚೆ ಅದನ್ನು ತಡೆಯಲು ಬಂದಿದೆ ಎಂದು ನಾನು ಭಾವಿಸುತ್ತೇನೆ. ಈ ಪುಸ್ತಕ ಪ್ರಶ್ನೆಗಳಿಗೆ ಉತ್ತರಿಸಲು ಮಾಡಿರುವ ಪ್ರಯತ್ನ.

ಸೇವಾ ಗ್ರಾಮ, ವರ್ಧಾ — ಮೊ.ಕ.ಗಾಂಧಿ

೨.೨.೧೯೩೬

ಪೀಠಿಕೆ
(ಮೊದಲ ಅವೃತಿ)

ನಾವು ಎದುರಿಸುತ್ತಿರುವ ಬಡತನದ ಸಮಸ್ಯೆಗೆ ಬಂಡವಾಳವಾದವು ಮದ್ದಾಗಬಹುದು ಎಂಬುದರ ಬಗ್ಗೆ ಈಗ ಪ್ರಪಂಚದಾದ್ಯಂತ ಚಿಂತಕರಲ್ಲಿ ಅತೃಪ್ತಿ ಬೆಳೆಯುತ್ತಿದೆ. ಕಚ್ಚಾ ಸಾಮಗ್ರಿಗಳ ನಿರಂತರ ಹರಿಯುವಿಕೆ ಮತ್ತು ತಯಾರಾದ ಉತ್ಪಾದನೆಗಳಿಗೆ ಸಿದ್ಧವಾದ ಮಾರುಕಟ್ಟೆ ಈ ಎರಡರ ಮೇಲೆ ಕೈಗಾರಿಕೆಗಳು ನಿಂತಿವೆ. ಆದಕಾರಣ, ಕಚ್ಚಾ ಸಾಮಗ್ರಿಗಳ ಮೇಲೆ ನಿಯಂತ್ರಣ ಮತ್ತು ಮಾರುಕಟ್ಟೆಯು ಕೈಗಾರಿಕೆಗಳ ನೆಲಗಟ್ಟಾಗಿದೆ. ಈ ಕಚ್ಚಾ ಸಾಮಗ್ರಿ ಮತ್ತು ಮಾರುಕಟ್ಟೆಯ ನಿರ್ಮಾಣ ಹಿಂಸೆಯನ್ನು ಅಪೇಕ್ಷಿಸುತ್ತದೆ. ಸೋವಿಯತ್ ಕಮ್ಯುನಿಸಂ ಲಾಭದ ಪ್ರವೃತ್ತಿಯನ್ನು ತೆಗೆದು ಹಾಕುವ ಕಾರಣಕ್ಕಾಗಿ, ಕೇಂದ್ರಿಕೃತ ಉತ್ಪಾದನಾ ವಿಧಾನವನ್ನು ಉಳಿಸಕೊಂಡಿತು. ಇದು ಅಧಿಕಾರದ ಕೇಂದ್ರಿಕರಣಕ್ಕೆ ಎಡೆ ಮಾಡಿಕೊಡುತ್ತದೆ. ಆದುದರಿಂದ ಜನ ಸಾಮಾನ್ಯರ ಒಳಿತಿಗಾಗಿ ಆಡಳಿತದಲ್ಲಿ ಹೆಚ್ಚಿನ ಮಟ್ಟದ ಧರ್ಮದರ್ಶಿತ್ವ ಅಗತ್ಯವಾಗುತ್ತದೆ. ಸಂಪತ್ತಿನ ಕೇಂದ್ರಿಕರಣದಲ್ಲಿನ ಪರಿಸ್ಥಿತಿಗಿಂತ ಇನ್ನೂ ಹೆಚ್ಚಿನ ಮಟ್ಟದ ಧರ್ಮದರ್ಶಿತ್ವ ಅಗತ್ಯವಾಗಿ ಬೇಕಾಗುತ್ತದೆ. ಅಂತಿಮವಾಗಿ ಕಚ್ಚಾ ಸಾಮಗ್ರಿಗಳ ಸಂಗ್ರಹಣೆ ಮತ್ತು ತಯಾರಾದ ಉತ್ಪಾದನೆಗಳ ವಿತರಣೆಯಲ್ಲಿ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಬಂಡವಾಳವಾದ ಮತ್ತು ಕಮ್ಯುನಿಸಂ ಈ ಎರಡೂ ಪದಾರ್ಥಗಳ ಹಣದ ಮೌಲ್ಯವನ್ನು ಮಾತ್ರ ಗಮನಕ್ಕೆ ತೆಗೆದು ಕೊಳ್ಳುತ್ತದೆ ಮತ್ತು ಅದನ್ನೇ ಆಧರಿಸಿದೆ. "ಆರ್ಥಿಕ ಮನುಷ್ಯ" (economic man) ಎಂಬುವನು ಅಸ್ತಿತ್ವದಲ್ಲಿಯೇ ಇಲ್ಲ ಎಂಬುದನ್ನು ಮರೆಯುತ್ತವೆ. ಮಾನವ ಸಂಬಂಧ ಮತ್ತು ಸಂಸ್ಕೃತಿಯ ಪರಿಣಾಮಗಳನ್ನು ನಿರ್ಲಕ್ಷಿಸಲಾಗುತ್ತದೆ. ಈ ಪುಸ್ತಕವು ಪೌರಾತ್ಯ ನಾಗರೀಕತೆಯ ನೆಲಗಟ್ಟಾದ ಮನುಷ್ಯನ ಅಗತ್ಯ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಆಧರಿಸಿದ ಹೊಸ ಆರ್ಥಿಕ ವ್ಯವಸ್ಥೆಯನ್ನು ಚರ್ಚಿಸುತ್ತದೆ. ಮನುಷ್ಯ ಸಂಕೀರ್ಣವಾದ ಅಸ್ತಿತ್ವ ಉಳ್ಳವನು. ಶ್ರಮ ವಿಭಜನೆಯನ್ನು ಸಂಪೂರ್ಣವಾಗಿ ಒಂದು ತುದಿಗೆ ಕೊಂಡೊಯ್ದಿರುವ ಈ ವ್ಯವಸ್ಥೆ ಅವನನ್ನು ಬೆಳೆಸಲಾರದು ಆತನ ಧರ್ಮ,ತತ್ವ ಸಿದ್ಧಾಂತ, ರಾಜಕಾರಣ, ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆ ಎಲ್ಲಾ ಸೇರಿಯೇ ಒಬ್ಬ ಸಾಂಸ್ಕೃತಿಕ ಮನುಷ್ಯ ಹೊರಹೊಮ್ಮಿದ್ದಾನೆ. ಅವನ ಬದುಕಿನ ಈ ಅಂಶಗಳನ್ನು ವಿಭಜಿಸಿ ಪ್ರತ್ಯೇಕಿಸಿ ಅವನನ್ನು ಬೆಳೆಸುವ ಪ್ರಯತ್ನ ಸಾಧ್ಯವಾಗದು.

ಅಖಿಲ ಭಾರತ ನೂಲುವವರ ಸಂಘ ಮತ್ತು ಅಖಿಲ ಭಾರತ ಗ್ರಾಮೀಣ ಕೈಗಾರಿಕೆಗಳ ಸಂಘದ

ಚಟುವಟಿಕೆಗಳಲ್ಲಿ ಈ ಪುಟ್ಟ ಪುಸ್ತಕದಲ್ಲಿ ಹೇಳಲಾಗಿರುವ ಸಿದ್ಧಾಂತದ ಪ್ರಾಯೋಗಿಕ ಅಂಶ ಕಾಣಬಹುದು. ಈ ಸಂಘಟನೆಗಳ ಆದರ್ಶಗಳ ಬಗೆಗಿನ ಅನು ಮಾನಗಳಿಗೆ ಸ್ಪಷ್ಟೀಕರಣವನ್ನು ಈ ಪುಟ್ಟ ಪುಸ್ತಕ ನೀಡಲು ಸಮರ್ಥವಾದರೆ ಈ ಪುಟ್ಟ ಪುಸ್ತಕ ಬರೆದುದು ಸಾರ್ಥಕವಾಗುತ್ತದೆ.

ಮಗನವಾಡಿ, ವಾರ್ಧಾ ಜೆ.ಸಿ ಕುಮಾರಪ್ಪ

೨೧.೧೨.೩೬

ಪೀಠಿಕೆ

(೪ನೇ ಆವೃತಿಯ ಪೀಠಿಕೆಯ ಸಂಗ್ರಹಾನುವಾದ)

ಈ ಮಧ್ಯಂತರದಲ್ಲಿ (೧೯೪೨-೪೫) ವಿಕೇಂದ್ರಿಕರಣದ ಪರವಾದ ನಮ್ಮ ವಾದಕ್ಕೆ ಪೂರಕವಾಗಿ ಪ್ರಪಂಚದಲ್ಲಿ ಅನೇಕ ಘಟನೆಗಳು ಜರುಗಿವೆ. ಇವು ನಮ್ಮ ವಾದವನ್ನು ಬೆಂಬಲಿಸುತ್ತದೆ ಮತ್ತು ಅದಕ್ಕೆ ಪ್ರಾತ್ಯಕ್ಷಿಕೆ ಒದಗಿಸುತ್ತದೆ. ಸಾಮ್ರಾಜ್ಯಶಾಹಿ ಬ್ರಿಟನ್ ಮತ್ತು ಅಮೇರಿಕಾದೊಡನೆ, ಸೋವಿಯತ್ ರಷ್ಯಾ ಕೈ ಜೋಡಿಸಿರುವುದು ಕೈಗಾರಿಕೆಗಳ ಕೇಂದ್ರೀಕರಣ ಪ್ರಜಾಪ್ರಭುತ್ವದ ಬೆಳವಣಿಗೆಗೆ ಮಾರಕ ಎಂಬುದನ್ನು ಹೇಳುತ್ತದೆ. ಆರ್ಥಿಕ ವಲಯದಲ್ಲಿನ ಏಕಸಾಮ್ಯತೆ ಮತ್ತು ಬೆಲೆ ತಗ್ಗದಂತೆ ಮಾಡುವ ತಂತ್ರಗಳು ಸರ್ವಾಧಿಕಾರದ ಇನ್ನೊಂದು ರೂಪವೇ ಆಗಿದೆ. ಬೇರೆ ಬೇರೆ ಕ್ಷೇತ್ರದಲ್ಲಿ ಈ ಮನಶಾಸ್ತ್ರೀಯ ಪರಿಕಲ್ಪನೆ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಪ್ರತಿ ಹಂತದಲ್ಲಿ ' ನಾನು ಹೇಳಿರಲಿಲ್ಲವೇ' ಎಂಬ ಉದ್ಗಾರ ಕಾಣಿಸಿಕೊಳ್ಳುತ್ತದೆ. ಪುಸ್ತಕದಲ್ಲಿನ ಸಿದ್ಧಾಂತಗಳು ಸಾರ್ವಕಾಲಿಕ ಆಸಕ್ತಿಯ ವಿಷಯವಾದ ಕಾರಣ ಮತ್ತೆ ಪ್ರಕಸಲಾಗುತ್ತಿದೆ ಕೆಲವು ಹೊಸ ಅಧ್ಯಾಯ ಸೇರಿಸಿರುವ ಕಾರಣ ನಮ್ಮ ವಾದ ಗಟ್ಟಿಯಾಗಿ ಕಾಣಿಸಿಕೊಂಡಿದೆ.

ಗ್ರಾಮಕೇಂದ್ರಿತ ಆರ್ಥಿಕ ವ್ಯವಸ್ಥೆಗೊಂದು ಪ್ರಸ್ತಾವನೆ

ಭಾಗ –೧

ಚಾರಿತ್ರಿಕ ಹಿನ್ನೆಲೆ

ವಿಕಾಸದ ವಿವಿಧ ಘಟ್ಟಗಳು

ಪ್ರಾಣಿ ಸಾಮ್ರಾಜ್ಯ

ಆದಿಮ ಸ್ಥಿತಿಯಲ್ಲಿ ಮನುಷ್ಯ ಹಾಗೂ ಇತರ ಪ್ರಾಣಿಗಳು ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಮಾತ್ರ ಆರ್ಥಿಕ ಚಟುವಟಿಕೆಯನ್ನು ನಡೆಸುತ್ತವೆ. ಇಲ್ಲಿ ಆರ್ಥಿಕತೆ ಎಂದರೆ ಹಣದ ವಹಿವಾಟಿನ ನಮ್ಮ ಗ್ರಹಿಕೆಯ ಆರ್ಥಿಕ ಚಟುವಟಿಕೆ ಅಲ್ಲ. ಜೀವಿಗಳು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿ ಕೊಳ್ಳಲು ಪ್ರಕೃತಿಯಲ್ಲಿ ನಡೆಸುವ ಚಟುವಟಿಕೆಯನ್ನು 'ಆರ್ಥಿಕತೆ ಎಂದು ಗ್ರಹಿಸಬೇಕು. ಆ ಮೂಲಭೂತ ಅಗತ್ಯಗಳು ಯಾವುವೆಂದರೆ –

೧. ಆಹಾರ

೨. ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆ

೩. ಹೊರಗಿನ ಆಕ್ರಮಣಗಳಿಂದ ರಕ್ಷಣೆ

ನಿಸರ್ಗದಲ್ಲಿರುವ ಆಹಾರ ಪದಾರ್ಥಗಳನ್ನು ಸಂಗ್ರಹಿಸುವುದು ಆರಂಭಿಕ ಆರ್ಥಿಕತೆ. ಒಂದು ಮಂಗಕ್ಕೆ ಹಸಿವಾದರೆ, ಅದು ತನ್ನ ಕೈಯನ್ನು ಚಾಚಿ, ಹಣ್ಣನ್ನೋ, ಎಲೆಯನ್ನೋ ಕಿತ್ತುಕೊಳ್ಳುತ್ತದೆ. ಮಂಗ ಆ ಹಣ್ಣನ್ನೋ, ಎಲೆಯನ್ನೋ ಉತ್ಪಾದಿಸುವಲ್ಲಿ ಅದರ ಪಾತ್ರವೇನೂ ಇಲ್ಲ. ಒಂದು ವೇಳೆ ಈ ರೀತಿ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವ ನಿಟ್ಟಿನಲ್ಲಿ ಏನಾದರೂ ಅಡ್ಡಿ– ಆತಂಕ ಉಂಟಾದರೆ ಘರ್ಷಣೆ ಅಥವಾ ಹಿಂಸೆ ಉಂಟಾಗುತ್ತದೆ. ಹೀಗಾಗಿ ಹಸಿದ ನಾಯಿಯೊಂದು ಮೂಳೆ ಕಡಿಯುತ್ತಿದ್ದಾಗ ಅಡ್ಡಿ ಏನಾದರು ಉಂಟಾದರೆ ತಕ್ಷಣವೇ ಅಲ್ಲಿ ಹಿಂಸೆ ಕಾಣುತ್ತದೆ.

ಈ ಘಟನೆಯಲ್ಲಿ ಪ್ರಾಣಿಯು ಪೂರ್ಣ ಸ್ವಾರ್ಥಿಯೂ, ಸ್ವಕೇಂದ್ರಿತವೂ ಆಗಿರುತ್ತದೆ. ಗುಂಪಿನಲ್ಲಿರುವ ಪ್ರಾಣಿಗಳಾದರೆ ಅವೆಲ್ಲವೂ ಒಟ್ಟಾಗಿ ತಮ್ಮ ಬೇಟೆಯ ಮೇಲೆ ತೋಳದಂತೆ ಬೀಳುತ್ತವೆ. ಆ ಸಂದರ್ಭದಲ್ಲಿ ಅವು ಕೇವಲ ತನ್ನ ಗುಂಪಿನ ಹಿತಾಸಕ್ತಿಗಷ್ಟೇ ಸೀಮಿತವಾಗಿರುತ್ತವೆ ಎಂಬುದನ್ನು ಗಮನಿಸಬಹುದು. ಅವು ಆಕ್ರಮಣ ಮಾಡಲಷ್ಟೇ ಸಂಘಟಿತವಾಗಿರುತ್ತವೆ.

ಪ್ರಾಣಿಗಳು ನೈಸರ್ಗಿಕ ವಿಕೋಪಗಳಿಂದ ರಕ್ಷಣೆ ಪಡೆಯಬೇಕಾದ ಸಂದರ್ಭದಲ್ಲಿ, ನೈಸರ್ಗಿಕ ಆಶ್ರಯತಾಣವೆನ್ನಬಹುದಾದ ಗುಹೆ, ಮರದ ಪೊಟರೆ ಇತ್ಯಾದಿಗಳಲ್ಲಿ ಆಶ್ರಯ ಪಡೆಯುತ್ತವೆ. ಪಕ್ಷಿಗಳು ಮತ್ತು ಜೇನು ನೊಣದಂತಹ ಕೀಟಗಳು ಸ್ವ–ಪ್ರಯತ್ನದಿಂದ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ. ಅವುಗಳಲ್ಲಿ ಪರಾವಲಂಬನೆ ಹೆಚ್ಚಿಲ್ಲ. ಅವು ತಮ್ಮ ಸ್ವಪ್ರಯತ್ನದಿಂದ ಅಗತ್ಯತೆಯನ್ನು ಪೂರೈಸಿಕೊಳ್ಳುತ್ತವೆ.

ಕೆಲವು ಪ್ರಾಣಿಗಳು, ಸಾಮಾನ್ಯವಾಗಿ ಹೊರಗಿನ ಆಕ್ರಮಣದಿಂದ ರಕ್ಷಣೆ ಪಡೆದುಕೊಳ್ಳಲು ಗುಂಪುಗೂಡಿ ಇರುತ್ತವೆ. ಕುರಿ,ದನ,ಆನೆಯಂತಹ ಪ್ರಾಣಿಗಳ ಸ್ವಭಾವದಲ್ಲಿ ಇದನ್ನು ಕಾಣಬಹುದು. ಈ ರೀತಿಯ ಪ್ರಾಣಿಗಳಲ್ಲಿ, ಸಾಮಾಜಿಕ ಅವಲಂಬನೆಯ ದೃಷ್ಟಿ ಇರುತ್ತದೆ. ಇವು ಸ್ವಲ್ಪ ಮಂದ

ಮತ್ತು ಶಾಂತಿಯುತ ಧೋರಣೆಯ ಪ್ರಾಣಿಗಳು. ಇವು ತೋಳಗಳಂತೆ ಆಕ್ರಮಣಕಾರಿಯೂ, ಭಯೋತ್ಪಾದಕವೂ ಆಗಿರುವುದಿಲ್ಲ. ಆದುದರಿಂದ ಈ ಭಿನ್ನತೆಯನ್ನು ಗುರುತಿಸಿಕೊಳ್ಳಲು ನಾವು ಈ ಪ್ರಾಣಿಗಳನ್ನು ಎರಡು ಗುಂಪುಗಳನ್ನಾಗಿ ವಿಭಾಗಿಸಿಕೊಳ್ಳೋಣ.

೧ ಆಕ್ರಮಣಕಾರಿ ಪ್ರವೃತ್ತಿಯುಳ್ಳವು (Pack Type)

೨ ರಕ್ಷಣೆಗಾಗಿ ಒಟ್ಟುಗೂಡಿ ಇರುವಂತಹವು (Herd Type)

ಮಾನವಕುಲ

ನಾವು ಎಚ್ಚರಿಕೆಯಿಂದ ಮಾನವ ಕುಲದ ಇತಿಹಾಸವನ್ನು ವಿಶ್ಲೇಷಿಸಿದರೆ, ಮೇಲಿನ ಎರಡೂ ಪ್ರವೃತಿಗಳು, ಮನುಷ್ಯ ವಿಕಾಸದ ಬೇರೆ ಬೇರೆ ಹಂತದಲ್ಲಿ ಕಾಣಸಿಗುತ್ತವೆ. ಆದಿಮ ಮನುಷ್ಯ ಹಣ್ಣು ಹಂಪಲುಗಳನ್ನು ಒಟ್ಟುಗೂಡಿಸುತ್ತಿದ್ದ ಮತ್ತು ಪ್ರಕೃತಿ ನೀಡುವ ಎಲೆ- ಬಳ್ಳಿಗಳಿಂದ, ಪ್ರಾಣಿಗಳ ಚರ್ಮದಿಂದ ಮೈ ಮುಚ್ಚಿಕೊಳ್ಳುತ್ತಿದ್ದ. ಗುಹೆಗಳಲ್ಲಿ ಮತ್ತು ಮರಗಿಡಗಳ ಸುರಕ್ಷಿತ ಪ್ರದೇಶಗಳಲ್ಲಿ ಆಶ್ರಯ ಪಡೆಯುತ್ತಿದ್ದ. ಮಾನವ ಕುಲದ ವಿಕಾಸದ ಮುಂದಿನ ಹಂತದಲ್ಲಿ, ಬೇಟೆ ಮತ್ತು ಮೀನು ಹಿಡಿಯುವಿಕೆಯನ್ನು ಕಲಿತ. ಈ ಪ್ರವೃತ್ತಿ ಪ್ರಾಣಿಗಳನ್ನು ಹಿಡಿಯಲು ಮತ್ತು ಕೊಲ್ಲಲು ಉಪಕರಣಗಳ ಅಥವಾ ಆಯುಧಗಳ ಸೃಷ್ಟಿಗೆ ಕಾರಣವಾಯಿತು. ಅಲೆಮಾರಿ ಜನಾಂಗ, ಪ್ರಾಣಿಗಳನ್ನು ಹಿಡಿದು, ಅದನ್ನು ಪಳಗಿಸಿಕೊಂಡು,ಅವುಗಳ ಉತ್ಪಾದನೆಗಳನ್ನು ಬಳಕೆ ಮಾಡಿಕೊಳ್ಳುತ್ತಿತ್ತು. ಈ ಜನಾಂಗ,ಆಹಾರ ಮತ್ತು ಮೇವಿಗಾಗಿ,ನೆಲೆಯಿಂದ ನೆಲೆಗೆ ಅಲೆದಾಡುತ್ತಿತ್ತು. ಮುಂದಿನ ಹಂತಗಳಲ್ಲಿ ಮಾನವ ತನ್ನ ಪರಿಸರದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದ ಮತ್ತು ಈ ಉದ್ದೇಶಗಳಿಗೆ ತನಗೆ ಅನುಕೂಲವಾಗುವ ಪರಿಸರ ಸೃಷ್ಟಿಸಿಕೊಂಡ ಮತ್ತು ತನ್ನ ಈ ಶ್ರಮದ ಫಲವನ್ನು ಅನುಭವಿಸಲು ಪ್ರಯತ್ನಿಸಿದ. ನಾಗರೀಕತೆಯು ಬೇಸಾಯದ ಹಂತದ ಬೆಳವಣಿಗೆಯ ಹಂತದಲ್ಲಿ ಇದನ್ನು ಸಾಧಿಸಿದೆ.

ನಾಗರೀಕತೆ ಮುಂದುವರೆದಂತೆಲ್ಲಾ ಶ್ರಮದ ವಿಭಾಗಕ್ರಮದ ಅಗತ್ಯ ಕಂಡುಬಂದಿತು. ಬೇರೆ ಬೇರೆ ರೀತಿಯಲ್ಲಿ,ಬೇರೆ ಬೇರೆ ಪ್ರದೇಶದ ಬುದ್ಧಿಮತ್ತೆಯನ್ನು ಅವಲಂಬಿಸಿ, ಕೈಗಾರೀಕರಣ ಆರಂಭವಾಯಿತು. ಕೈಗಾರೀಕರಣದಿಂದ ನಾಗರೀಕ ಮನುಷ್ಯ ಆರ್ಥಿಕ ಸಂಘಟನೆಗಳನ್ನು ಅಭಿವೃದ್ಧಿಪಡಿಸಿಕೊಂಡ. ಆ ನಿರ್ದಿಷ್ಟ ಆರ್ಥಿಕ ಸಂಘಟನೆಗಳು ವಿಕಾಸದ ಘಟ್ಟವನ್ನು ಪ್ರತಿಬಿಂಬಿಸುತ್ತವೆ. ಹಾಗೂ ಆ ವಿಕಾಸದ ಬೆಳವಣಿಗೆಯ ಪೂರ್ವಹಂತ, ಆ ಆರ್ಥಿಕ ಸಂಘಟನೆಯಲ್ಲಿ ಕಾಣಸಿಗುತ್ತದೆ.

ಒಟ್ಟಾರೆ ಹೇಳುವುದಾದರೆ, ಪ್ರಾಣಿಗಳ ಚಟುವಟಿಕೆ ಬಹುತೇಕ ವ್ಯಕ್ತಿ (ಪ್ರಾಣಿ) ನಿಷ್ಟವಾದ ಚಟುವಟಿಕೆ. ಸಂಘಜೀವಿ ಮತ್ತು ಸಸ್ಯಹಾರಿ ಪ್ರಾಣಿಗಳು (ಸಮುದಾಯ ಪ್ರವೃತ್ತಿ) ಮತ್ತು ಮಾಂಸಾಹಾರಿ ಪ್ರಾಣಿಗಳು ಆಹಾರಕ್ಕಾಗಿ ಆಕ್ರಮಣಕಾರಿಯಾಗಿ ಗುಂಪುಗೂಡುತ್ತದೆ. ವಿಷಯದಲ್ಲಿ ಹೊರತುಪಡಿಸಿ, ಒಟ್ಟಾರೆಯಾಗಿ ಈ ಚಟುವಟಿಕೆಗಳು ವ್ಯಕ್ತಿ(ಪ್ರಾಣಿ)ನಿಷ್ಟವಾದ ಪ್ರವೃತ್ತಿ ಎನ್ನಬಹುದು. ಬೇಟೆ ಪ್ರವೃತ್ತಿಯ ಬೇಟೆಗಾರ ಸಮುದಾಯ ಹಾಗೂ ನೆಲೆನಿಲ್ಲದ ಅಲೆಮಾರಿ ಸಮುದಾಯ, ಪ್ರಮುಖವಾಗಿ ("packtype" ವ್ಯಕ್ತಿನಿಷ್ಠವಾದುದು,ಆದಿಮವಾದುದು). ಇವು ಇತರ ಪ್ರಾಣಿಗಳ ಹಕ್ಕನ್ನು ಅದರ ಅಗತ್ಯವನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ.

ನಾಗರೀಕತೆಯ ಪರೀಕ್ಷೆ

ನಮ್ಮಲ್ಲಿರುವ ಲೌಕಿಕ ವಸ್ತುಗಳಾಗಲೀ.ನಮ್ಮ ಜೀವನ ಪದ್ಧತಿ ಅಥವಾ ಕ್ರಮವಾಗಲೀ ನಮ್ಮ ನಾಗರೀಕತೆಯ ಪರೀಕ್ಷೆಯಲ್ಲ. ಇತರ ಸಹಜೀವಿಗಳ ಸುಖಗಳಿಗೆ ನಾವು ಎಷ್ಟರ ಮಟ್ಟಿಗೆ ಗಮನ ನೀಡುತ್ತೇವೆ ಎಂಬುದು ನಮ್ಮ ನಾಗರೀಕತೆಯ ಪರೀಕ್ಷೆಯಾಗಿದೆ. ಆದಿಮ ಸ್ಥಿತಿ ಅದು ನಿಜಕ್ಕೂ ಅತ್ಯಂತ ಬರ್ಬರ ಸ್ಥಿತಿಯಾಗಿತ್ತು ಅಲ್ಲಿ ಯಾವುದೇ ಸಭ್ಯತೆ/ ನಾಗರೀಕತೆಯನ್ನು ನಿರೀಕ್ಷಿಸಲಾಗುವುದಿಲ್ಲ. ನಿಜವಾದ ಸಭ್ಯತೆ ಅಥವಾ ನಾಗರೀಕತೆಯಲ್ಲಿ "ಹಕ್ಕು" "ಕರ್ತವ್ಯ"ವಾಗಿ ಬದಲಾಗುತ್ತದೆ. ಇವು "ನಾಗರೀಕ" ನನ್ನು ಇನ್ನಿತರ ಜೀವಿಗಿಂತ ಭಿನ್ನವಾಗಿಸುತ್ತದೆ.

ನಾವು ನಾಗರೀಕತೆಯಲ್ಲಿ ಬೇಸಾಯದ ಹಂತವನ್ನು ತಲುಪಿದಾಗ, ಇನ್ನೊಬ್ಬರ ಬಗ್ಗೆ ಗೌರವವನ್ನು ಕಾಣಬಹುದು. ಗಡಿ ಹಾಗೂ ಗುರುತು ಹಾಕಿಕೊಳ್ಳುವ ಮೂಲಕ ತನ್ನ ಶೋಷಣೆಯ ವ್ಯಾಪ್ತಿಗೆ ಅವನು ಸೀಮಿತಗೊಳ್ಳುತ್ತಾನೆ. ಇದರಿಂದಾಗಿ ತನ್ನ ಕೃತ್ಯಗಳಿಗೆ ತಾನು ಜವಾಬ್ದಾರನಾಗುವ ಮತ್ತು ಅದರ ಪರಿಣಾಮ, ಮತ್ತಿಬ್ಬೊರ ಮೇಲೆ ಏನಾಗುತ್ತದೆ ಎಂಬ ತಿಳುವಳಿಕೆ ಬರುತ್ತದೆ. ನಾಗರೀಕತೆಯ ಈ ಹಂತದಲ್ಲಿ ಆರ್ಥಿಕ ಸಂಘಟನೆಗಳು ವ್ಯಕ್ತಿಕೇಂದ್ರಿತ ಆಗಿರುವುದಿಲ್ಲ. ಸಾಮಾಜೀಕರಣಗೊಳ್ಳುತ್ತವೆ. ಚಟುವಟಿಕೆಗಳು ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಈ ನಿಯಂತ್ರಣ, ನಿಯಮಗಳು ಹಾಗೂ ನಿಯಂತ್ರಣ ವ್ಯವಸ್ಥೆಯಿಂದ ಸಾಧಿತವಾಗುತ್ತದೆ. ನಾಗರೀಕತೆಯು ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಕ್ರಮಿಸಲು ಸಾವಿರಾರು ವರ್ಷಗಳಾಗಬಹುದು. ಏಕೆಂದರೆ ಹಿಂದಿನ ಹಂತದ ಗುಣಧರ್ಮ, ನಡವಳಿಕೆ ಈ ಎಲ್ಲವೂ ನಾಶಗೊಳ್ಳಬೇಕು ಅಥ-ವಾ ಮರುರೂಪಿತವಾಗಬೇಕು ಮತ್ತು ಮುಂದಿನ ಹಂತದ ನಡವಳಿಕೆಗಳು ರೂಪುಗೊಳ್ಳಬೇಕು. ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸಾಗಲು ಸಾಕಷ್ಟು ಸಮಯ ಸಿಗದಿದ್ದರೆ,(ಅಂದರೆ ಮನುಷ್ಯನ ಗುಣಧರ್ಮಗಳು) ಅನಗತ್ಯ ಅಡೆತಡೆ ಸೃಷ್ಟಿಯಾಗುತ್ತದೆ. ಮನುಷ್ಯ ಸಮಾಜದಲ್ಲಿ ಸಂಘಟನೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

ಗುಣಧರ್ಮಗಳು

ಮಾನವನ ಆರ್ಥಿಕ ಸಂಘಟನೆಯನ್ನು ಸ್ಥೂಲವಾಗಿ ಎರಡು ವಿಭಾಗಗಳಲ್ಲಿ ವಿಭಾಗಿಸಬಹುದು.

೧ ವ್ಯಕ್ತಿ ಮೂಲವಾದದ್ದು

೨ ಸಮಾಜ ಮೂಲವಾದದ್ದು

ಪ್ರಾಣಿಗಳ ದೃಷ್ಟಿಕೋನದ ಆ ಮೂಲದಿಂದಲೇ ಇವು ಬೆಳೆದದ್ದು.

೧. Pack Type ಗುಂಪು ಮಾದರಿ

೨. Herd Type ಮಂದೆ ಮಾದರಿ ಎಂದು ವಿಭಾಗ ಮಾಡಬಹುದು.

ಗುಂಪು ಮಾದರಿಯ ಕೆಲವು ಗುಣಧರ್ಮಗಳನ್ನು ಕಾಣಬಹುದು

೧. ಬದುಕಿನ ಬಗ್ಗೆ ದೂರದೃಷ್ಟಿ ಇಲ್ಲದೇ ಇರುವುದು.

೨. ವ್ಯಕ್ತಿಗಳ ಕೈಯ್ಯಲ್ಲಿ ಅಥವಾ ಸಣ್ಣ ಗುಂಪಿನ ಕೈಯ್ಯಲ್ಲಿ ನಿಯಂತ್ರಣ ಹೊಂದಿರುವುದು.

೩. ತೀವ್ರ ಶಿಸ್ತು

೪. ನಿಜವಾದ ಕೆಲಸಗಾರರನ್ನು ಗಮನಕ್ಕೇ ತೆಗೆದುಕೊಳ್ಳದೇ ಇರುವುದು ಅಥವಾ ಈ ಆರ್ಥಿಕ ಸಂಘಟನೆಗೆ ಕೊಡುಗೆ ನೀಡಿದವರಿಗೆ ಗಮನ ನೀಡದೇ ಇರುವುದು.

೫. ವೈಯುಕ್ತಿಕ ವ್ಯಕ್ತಿತ್ವವನ್ನು ತುಳಿದಿಡುವುದು- ಸ್ಪರ್ಧೆ ಮತ್ತು ಶತ್ರುತ್ವ ಕಾರಣ ಅಸಹನೆ ವ್ಯಕ್ತಪಡಿಸುವುದು.

೬. ಪ್ರತಿಫಲ ಅಥವಾ ಪ್ರತಿಫಲಾಪೇಕ್ಷೆಯೇ ಈ ಎಲ್ಲಾ ಚಟುವಟಿಕೆಗೆ ದೂಡುವ ಶಕ್ತಿಯಾಗಿದೆ.

೭. ಬಂದ ಲಾಭ ಅಥವಾ ಅನುಕೂಲಗಳ ಕೇಂದ್ರೀಕರಣ ಮತ್ತು ಕೆಲವೇ ಕೆಲವು ಜನರಲ್ಲಿ ಅದು ಹಂಚಿಕೆಯಾಗುವ ಪ್ರಕ್ರಿಯೆ.

೮. ಮಾಡಿದ ಸೇವೆ, ಶ್ರಮ ಇತ್ಯಾದಿಗಳಿಗೆ ಗಮನ ನೀಡದೇ ಎಷ್ಟು ಸಾಧ್ಯವೋ ಅಷ್ಟು ಲಪಟಾಯಿಸುವುದು.

ಅಧಿಕಾರ ಮತ್ತು ಲಾಭಗಳು ಕೇಂದ್ರೀಕೃತವಾಗಿರುವ ಕಾರಣ, ಸೀಮಿತ ಭೌಗೋಳಿಕ ಚಟುವಟಿಕೆಗಳಿಗೆ ಸೀಮಿತವಾಗುತ್ತದೆ. ಹಾಗಾಗಿ ಪಟ್ಟಣ ಕೇಂದ್ರಿತವಾಗುತ್ತದೆ ಎಂದು ನಾವು ಇದಕ್ಕೆ ಸೇರಿಸಬಹುದು. ಮಂದೆ ಮಾದರಿಯ ಗುಣಧರ್ಮಗಳನ್ನು ಹೀಗೆ ಕಾಣಬಹುದು.

೧.ಬದುಕಿನ ಬಗ್ಗೆ ದೂರಗಾಮೀ ದೃಷ್ಟಿ

೨.ಸಾಮಾಜಿಕ ನಿಯಂತ್ರಣ,ವಿಕೇಂದ್ರೀಕರಣ,ಅಧಿಕಾರದ ಹಂಚಿಕೆ ಮತ್ತು ನಿಯಂತ್ರಣ ನಿರ್ಮೋಹದ್ದಾಗಿರುತ್ತದೆ.

೩.ನಡವಳಿಕೆ ನಿಯಮ ಮತ್ತು ಸಾಮಾಜಿಕ ನಿಯಂತ್ರಣ ಉಪಾಯಗಳ ಮೂಲಕ ನಿರ್ದಿಷ್ಟ ಗುರಿ ತಲುಪಲು ಚಟುವಟಿಕೆಗಳನ್ನು ಉತ್ತೇಜಿಸಲಾಗುತ್ತದೆ.

೪.ದುರ್ಬಲರು ಮತ್ತು ಅಸಹಾಯಕರನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

೫.ಸಹನೆಯ ಮೂಲಕ ವೈಯುಕ್ತಿಕ ಬೆಳವಣಿಗೆಯನ್ನು ಉತ್ತೇಜಿಸುವುದು.

೬.ನಿಗದಿತ ಆದರ್ಶಗಳು ಮತ್ತು ಸಾಮಾಜಿಕ ಚಲನೆಯನ್ನು ಗಮನದಲ್ಲಿರಿಸಿಕೊಂಡು ಚಟುವಟಿಕೆಗಳನ್ನು ನಿರ್ದೇಶಿಸುವುದು.

೭.ವ್ಯಕ್ತಿಯ ಅಗತ್ಯಗಳಿಗೆ ತಕ್ಕಂತೆ ಆದಷ್ಟು ಲಾಭಗಳನ್ನು ವಿತರಿಸುವುದು

೮. ಲೋಕಹಿತದ ಉದ್ದೇಶದಿಂದ ಎಲ್ಲರ ಅಗತ್ಯಗಳನ್ನು ತೃಪ್ತಿಪಡಿಸುವುದು ಉದ್ದೇಶ.

ನಿಯಂತ್ರಣ ಮತ್ತು ಉತ್ಪಾದನೆಗಳನ್ನು ವಿಕೇಂದ್ರೀಕರಿಸುವ ಉದ್ದೇಶ ಮತ್ತು ಪ್ರಯತ್ನ ಇದ್ದ ಕಾರಣದಿಂದ ಆರ್ಥಿಕ ಚಟುವಟಿಕೆ ವಿಶಾಲ ವ್ಯಾಪ್ತಿಯದ್ದಾಗಿರುತ್ತದೆ. ಅದು ವಿಸ್ತಾರವಾದ ಭೌಗೋಳಿಕ ಪರಿಸರದಲ್ಲಿ ಅಂದರೆ ಗ್ರಾಮ ಮತ್ತು ಗ್ರಾಮಗಳ ಗುಂಪುಗಳಲ್ಲಿ ಚದುರಿ ಹೋಗಿರುತ್ತದೆ. ಈ ಎಲ್ಲಾ ಅಂಶಗಳ ಬೆಳಕಿನಲ್ಲಿ ಮುಂದಿನ ಎರಡು ಅಧ್ಯಾಯಗಳಲ್ಲಿ ಮಾನವ ಕುಲದಿಂದ ಹೊರಹೊಮ್ಮಿದ ಆರ್ಥಿಕ ಸಂಘಟನೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

*****

ನೀರಿನ ಬಜೆಟ್

ಪ್ರತಿ ವ್ಯಕ್ತಿಯ ಪ್ರತಿದಿನದ ನೀರಿನ ಬಳಕೆ ಅಂದಾಜು

೧. ಪ್ರಾತ: ವಿಧಿಗಳಿಗೆ	–	೨೦ ಲೀ
೨. ಸ್ನಾನಕ್ಕೆ	–	೨೫ ಲೀ
೩. ಅಡುಗೆ ಮತ್ತು ಪಾತ್ರೆ	–	೩೦ ಲೀ
೪. ಕುಡಿಯಲು	–	೦೫ ಲೀ
೫. ಬಟ್ಟೆ ಒಗೆಯಲು	–	೫೦ ಲೀ
ಒಟ್ಟು	–	೧೩೦ ಲೀ

ಒಂದು ಲೀಟರ ನೀರಿಗೆ ೨ ರೂ ಎಂದು ಪರಿಗಣಿಸಿ ಈ ಕೆಳಗಿನಂತೆ ಲೆಕ್ಕ ಹಾಕಿದೆ.

ನಾಲ್ಕು ಮಂದಿ ಇರುವ ಮನೆಗೆ ಪ್ರತಿದಿನ ಬೇಕಾದ ನೀರು :

೧೩೦ ಲೀ X ೪ = ೫೨೦ ಲೀ

ಒಂದು ಮಾಸಕ್ಕೆ:

೫೨೦ X ೩೦ X ೨/- = ೩೧,೨೦೦ ರೂ.

ಒಂದು ವರ್ಷಕ್ಕೆ :

೩೧,೨೦೦ X ೧೨ = ೩,೭೪,೪೦೮ ರೂ.

ಆದರೆ ನಾವು ನಿಜಕ್ಕೂ ಕೊಡುತ್ತಿರುವುದು ಎಷ್ಟು ?

ಬೆಂಗಳೂರು ನಗರದ ಮನೆಯಲ್ಲಿ ನೀರಿಗೆ ನೀಡುವ ಶುಲ್ಕ
ಅಂದಾಜು ಮಾಸಿಕ ೫೦೦ ರೂ ನಂತೆ ವರ್ಷಕ್ಕೆ ೬೦೦೦ ರೂ ಮಾತ್ರ.

ಹಾಗಾಗಿಯೇ ನಮಗೆ ನೀರಿನ ಬೆಲೆಯಿಲ್ಲ

ಮತದಾರರಿಗೊಂದು ಕಿವಿಮಾತು

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಕರ್ನಾಟಕ ವಿಧಾನ ಸಭೆಯ ಚುನಾವಣೆಯ ಸಂದರ್ಭದಲ್ಲಿ ಮತದಾರರಿಗೆ ಮಾಡಿರುವ ಮನವಿ

ನಾವಿಂದು ಕರ್ನಾಟಕ ವಿಧಾನ ಸಭಾ ಚುನಾವಣೆ ೨೦೧೮ರ ಬಹುದೊಡ್ಡ ಪ್ರಜಾಪ್ರಭುತ್ವದ ವೇದಿಕೆಯಲ್ಲಿ ನಿಂತಿದ್ದೇವೆ. ಚುನಾವಣೆಯ ಕಾವು ಮತ್ತು ಹವಾ ಅತಿ ವೇಗವಾಗಿ ಏರುತ್ತಿದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳು ಸಕಲ ರೀತಿಯಲ್ಲಿ ಸಜ್ಜುಗೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಬಹುಮತ ಗಳಿಸಿ, ಅಧಿಕಾರ ಹಿಡಿಯಲು ಸರ್ವ-ರೀತಿಯಲ್ಲಿ ಪ್ರಯತ್ನಿಸುತ್ತಿವೆ. ಇಂಥ ಸಂದರ್ಭದಲ್ಲಿ ಮತದಾರ ಮುಂದಿನ ೫ ವರ್ಷಗಳಲ್ಲಿ ಈ ರಾಜ್ಯದಲ್ಲಿ ಯಾರು ಜನಸೇವಕರಾಗಿ ಕೆಲಸ ಮಾಡುವರು? ಸಂವಿಧಾನಾತ್ಮಕ ಹಕ್ಕು-ಅಧಿಕಾರ-ಅವಕಾಶಗಳನ್ನು ಎಲ್ಲಾ ವರ್ಗಗಳಿಗೆ ತಲುಪಿಸುವವರು ಯಾರು? ಜನಪ್ರತಿನಿಧಿಗಳು, ಜನರ ಆಶೋತ್ತರಗಳಿಂದ ದೂರ ಸರಿದಿರುವುದೇಕೆ? ಚುನಾವಣೆಯಲ್ಲಿ ಆರಿಸಿ ಕಳುಹಿಸಿದ ಜನಪ್ರತಿನಿಧಿಗಳು ಚುನಾವಣೆಯ ನಂತರ ಜನರ ನಂಬಿಕೆ-ವಿಶ್ವಾಸಗಳನ್ನು ಕಳೆದುಕೊಳ್ಳಲು ಕಾರಣಗಳೇನು?

ಇಡೀ ವಿಶ್ವದಲ್ಲಿಯೇ, ಭಾರತ ಅತ್ಯಂತ ಹಿರಿದಾದ ಪ್ರಜಾಪ್ರಭುತ್ವ ದೇಶವಾಗಿದೆ. ಭಾರತದ ಸಂವಿಧಾನ ಜಗತ್ತಿನ ಶ್ರೇಷ್ಠ ಸಂವಿಧಾನಗಳಲ್ಲಿ ಒಂದಾಗಿದೆ. ಇಂತಹ ಘನತೆಯನ್ನು ಪಡೆದ ಭಾರತದ ಗಣರಾಜ್ಯದಲ್ಲಿನ ಒಂದು ರಾಜ್ಯವಾದ 'ಕರ್ನಾಟಕ' ಹಿಂದಿನ ೭೦ ವರ್ಷಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಪ್ರಬುದ್ಧ ಮತದಾರರು, ಅತ್ಯಂತ ನಿರ್ಣಾಯಕವಾಗಿ ಮತ ಚಲಾವಣೆ ಮಾಡಿ, ಪ್ರಜೆಗಳ ಸೇವಕ, ಪ್ರತಿನಿಧಿಯಾಗುವಂತಹ ಬಹಳಷ್ಟು ಅಭ್ಯರ್ಥಿಗಳನ್ನು ಗೆಲ್ಲಿಸಿರುವ ನಿದರ್ಶನಗಳಿವೆ. ಆದಾಗ್ಯೂ, ಭಾರತದಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದಂಥ ಚುನಾವಣೆ ಸುನಾಮಿಗಳು, ಸುಂಟರಗಾಳಿಗಳಲ್ಲಿ ಬಂದಂಥ ಧಾರ್ಮಿಕ ದುರಭಿಮಾನ, ಕೋಮುವಾದ, ಜನಾಂಗ ಶ್ರೇಷ್ಠತೆ, ಹೀರೋ ಆರಾಧನೆ, ಭ್ರಷ್ಟಾಚಾರ, ಅಧಿಕಾರಿಗಳ ನಿರಂಕುಶ ಹಿಡಿತ, ಲಿಂಗ ತಾರತಮ್ಯ, ದಲಿತರು ಮತ್ತು ಹಿಂದುಳಿದವರ ಅವಗಣನೆ, ಜನಸಾಮಾನ್ಯರನ್ನು ತತ್ತರಗೊಳಿಸಿವೆ. ಪ್ರಜೆಗಳ ಆರ್ಥಿಕ ಒತ್ತಡ ಮತ್ತು ಬೇಡಿಕೆಗಳು ರಾಜಕೀಯ ಪ್ರತಿನಿಧಿಗಳಿಗೆ ಮತ್ತು ಸರ್ಕಾರಗಳಿಗೆ ಸವಾಲಾಗಿ ಕಾಣುತ್ತಿವೆ. ನಾವು ಆರಿಸಿದ ಚುನಾಯಿತ ಪ್ರತಿನಿಧಿಗಳು, ವಿಧಾನ ಸಭೆಯಲ್ಲಿ, ಸಂಸತ್ತಿನಲ್ಲಿ ಹೇಗೆ ನಡೆದುಕೊಂಡಿದ್ದಾರೆ? ಹೇಗೆ ನಡೆದುಕೊಳ್ಳಬೇಕಿತ್ತು? ಅವರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ಆಯ್ಕೆ ಮಾಡಿದಂಥ ರಾಜಕೀಯ ಪಕ್ಷಗಳು ಇದಕ್ಕೆಷ್ಟು ಹೊಣೆ? ರಾಜಕೀಯ ಪಕ್ಷಗಳಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ, ಸೇವಾ ಮನೋಭಾವ, ಸಂವಿಧಾನಿಕ ಪ್ರಜ್ಞೆ ಮತ್ತು ಅರ್ಪಣಾ ಮನೋಭಾವದ ಸದಸ್ಯರು, ಪ್ರತಿನಿಧಿಗಳು ಇಲ್ಲವೆ? ಅಂಥವರನ್ನು ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ಏಕೆ ನಿಲ್ಲಿಸುತ್ತಿಲ್ಲ ಎಂದು ಜನರು ಪ್ರಶ್ನಿಸುತ್ತಿದ್ದಾರೆ. ದರ್ಪ, ಠೇಂಕಾರ, ಅಧಿಕಾರದ ಆರ್ಭಟ, ದೌಲತ್ತಿನ ಪ್ರದರ್ಶನ ಮಾಡದ, ಸರಳ, ನಿರಾಡಂಬರ,

ವಿನಮ್ರತೆಯ ಜನನಾಯಕರು ರಾಜಕೀಯ ಪಕ್ಷಗಳಲ್ಲಿ ಇಲ್ಲವೆ?

ರಾಷ್ಟ್ರದ ಆರ್ಥಿಕ ಪ್ರಗತಿಯ ಫಲಗಳು ಎಲ್ಲಾ ಜನರಿಗೆ ತಲುಪುತ್ತಿಲ್ಲ ಎಂಬ ಜನರ ಕೂಗು ಕೇಳಿಸಿಕೊಳ್ಳುವ ಜನಪ್ರತಿನಿಧಿಗಳು ಮತ್ತು ಸರ್ಕಾರ ರಚನೆಯಾಗಬೇಕಿದೆ. ಇದಕ್ಕಾಗಿ ರಾಜಕೀಯ ಇಚ್ಛಾಶಕ್ತಿಯನ್ನು ಶಾಸಕರು ಮತ್ತು ಶಾಸಕಾಂಗ ಹೊಂದಬೇಕಾಗುತ್ತದೆ. ಇಂಥ ಇಚ್ಛಾಶಕ್ತಿಯನ್ನು ಹೊಂದಿರುವಂಥ ಜನನಾಯಕರನ್ನು ಮಾತ್ರ ಚುನಾವಣೆಗಳ ಮೂಲಕ ಜನರು ಆರಿಸಿ ಕಳುಹಿಸಬೇಕಾಗಿದೆ.

ಭಾರತದ ಪಿತಾಮಹ ಮಹಾತ್ಮ ಗಾಂಧೀಜಿಯವರ ಮಹತ್ವದ ಆಶಯ 'ಜನತೆಯ ಹಿತಕ್ಕಾಗಿ ಪಣತೊಟ್ಟ ವಿಶಾಲ ಮನಸ್ಸಿನ ಮತ್ತು ಪ್ರಾಮಾಣಿಕರಾದ ಪ್ರತಿನಿಧಿಗಳು ಮಾತ್ರ ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡಬಲ್ಲರು. ಜನರಿಗೆ ಸ್ವಾತಂತ್ರ್ಯ, ಆತ್ಮಗೌರವ, ಒಗ್ಗಟ್ಟಿನ ತೀವ್ರಾಪೇಕ್ಷೆ ಇರಬೇಕು. ಅವರು ಒಳ್ಳೆಯವರನ್ನು, ಸತ್ಯಸಂಧರನ್ನು ಮಾತ್ರವೇ ತಮ್ಮ ಪ್ರತಿನಿಧಿಗಳಾಗಿ ಆರಿಸುವ ಪಣತೊಡಬೇಕು' ಎಂಬ ಮಾತು ಪ್ರಜಾಪ್ರಭುತ್ವದ ತಾಯಿಬೇರು.


ಡಾ॥ ಬಿ.ಆರ್. ಅಂಬೇಡ್ಕರ್ ಅವರು "ಈ ಸದನದ ಸದಸ್ಯರಾಗಲು ಕೇವಲ ಶಿಕ್ಷಣ ಏಕೈಕ ಅರ್ಹತೆಯಾಗುವುದು ಖಂಡಿತ ಸಾಧ್ಯವಿಲ್ಲ. ಇದಕ್ಕೆ ಪೂರಕವಾಗಿ ನಾವು ಭಗವಾನ್ ಬುದ್ಧರು ಬಳಸಿರುವ ಪದಗಳನ್ನು ಉಲ್ಲೇಖಿಸುವುದಾದರೆ, 'ಮನುಷ್ಯರು ಎರಡು ಅಂಶಗಳನ್ನು ಹೊಂದಿರಬೇಕು; ಒಂದನೆಯದು ಜ್ಞಾನ ಮತ್ತೊಂದು ಶೀಲ. ಶೀಲವಿಲ್ಲದ ಜ್ಞಾನ ಅಪಾಯಕಾರಿ. ಈ ದೆಸೆಯಲ್ಲಿ ಶೀಲ ಅಂದರೆ ನಡತೆ, ನೈತಿಕ ಸ್ಥೈರ್ಯ. ಯಾವುದೇ ಪ್ರಲೋಭನೆಗೆ ಒಳಗಾಗದೆ, ಸ್ವತಂತ್ರವಾಗಿರುವ ಸಾಮರ್ಥ್ಯ ಎಂದರ್ಥ. ಈ ನಿಟ್ಟಿನಲ್ಲಿ ಒಂದು ನಿರ್ದಿಷ್ಟ ಮಟ್ಟದ ಶೀಲ ಗಳಿಸದ ಯಾವುದೇ ಸದಸ್ಯರು ಈ ಪವಿತ್ರ ಸದನವನ್ನು ಪ್ರವೇಶಿಸುವುದನ್ನು ನಾನು ನೋಡಲು ಇಷ್ಟಪಡುವುದಿಲ್ಲ. ಜನರು ತಮ್ಮ ಕಲ್ಯಾಣದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಸದಸ್ಯರನ್ನಷ್ಟೆ ಆಯ್ಕೆ ಮಾಡುತ್ತಾರೆ" ಎಂದು ಸಚ್ಚಾರಿತ್ರ್ಯದ, ಪ್ರಾಮಾಣಿಕ ವ್ಯಕ್ತಿಗಳನ್ನು ಚುನಾವಣೆಯಲ್ಲಿ ಆಯ್ಕೆ ಮಾಡಬೇಕೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಆದ್ದರಿಂದ, ಕರ್ನಾಟಕದ ಪ್ರಜ್ಞಾವಂತ ಮತದಾರರು ಮಹಾತ್ಮ ಗಾಂಧೀಜಿಯವರು ಮತ್ತು ಬಾಬಾಸಹೇಬ್ ಅಂಬೇಡ್ಕರ್‌ರವರ ನುಡಿಗಳನ್ನು ಮನಸ್ಸಿನಲ್ಲಿ ಸ್ಥಾಪಿಸಿಕೊಂಡು ನಿಷ್ಕಲಂಕ, ಪ್ರಾಮಾಣಿಕ, ಸತ್ಯ–ನ್ಯಾಯಭೀರು, ಪಾರದರ್ಶಕ ವ್ಯಕ್ತಿಗಳನ್ನು ವಿಧಾನ ಸಭೆಗೆ ಆಯ್ಕೆ ಮಾಡಿ ಕಳುಹಿಸಬೇಕಾಗಿ ಮನವಿ ಮಾಡುತ್ತೇವೆ.

ಅಂತೆಯೆ, ರಾಜಕೀಯ ಪಕ್ಷಗಳು ಸದನದಲ್ಲಿ ಇರಲೇಬೇಕಾದ ಪ್ರಾಮಾಣಿಕ, ನಿಸ್ವಾರ್ಥಿ, ದಾರ್ಶನಿಕ, ಸಮಾನತೆ–ಸಹೋದರತೆಯ ತತ್ವಬದ್ಧ ಜನಸೇವಕರನ್ನು ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸಬೇಕಾಗಿ ವಿನಂತಿ. ಭಾರತದ ಪ್ರಜಾಪ್ರಭುತ್ವವನ್ನು ಚಿರಸ್ಥಾಯಿಗೊಳಿಸಬೇಕಾದ ಎಲ್ಲಾ ಮತದಾರ ಬಂಧುಗಳು ಕಾಳಜಿಯಿಂದ ಮತಗಟ್ಟೆಗೆ ಬಂದು, ಪ್ರಜಾಪ್ರಭುತ್ವ ಸಂರಕ್ಷಕ ವ್ಯಕ್ತಿಯನ್ನು ಚುನಾಯಿಸಬೇಕಾಗಿ ಅತ್ಯಂತ ಕಳಕಳಿಯಿಂದ ವಿನಂತಿಸುತ್ತೇವೆ. ●

ಸಾಧಕರು

ಅಬಿದ್ ಸುರತಿ ಅವರಿಗೆ ಈಗ ೮೨ ವರ್ಷ. ಅವರ ಬಗ್ಗೆ ಕೇಳಿದಾಗ ಅವರ ಮಾಡುತ್ತಿರುವ ಕೆಲಸವನ್ನು ನೋಡಿದಾಗ, ಕೆಲಸ ಮಾಡುವ ಮನಸ್ಸಿದ್ದರೆ, ಹಲವು ಕೆಲಸಗಳು ಕಣ್ಣಿಗೆ ಬೀಳುತ್ತವೆ ಮತ್ತು ಸಾಧಿಸುತ್ತೇವೆ ಇಲ್ಲವಾದರೆ ಇಲ್ಲ ಎಂಬುದು ನಿಜ ಎನಿಸುತ್ತದೆ. ಮೊದಲು ಬೇಕಾದದ್ದು ಮನಸ್ಸು ಮತ್ತು ಸಂಕಲ್ಪ ಶಕ್ತಿ. ಇತ್ತೀಚಿನ ದಿನಗಳಲ್ಲಿ ನೀರಿನ ಮಹತ್ವದ ಬಗ್ಗೆ ಬಹಳ ಜನ ಮಾತನಾಡುತ್ತಾರೆ. ನೀವು ಅದರ ಬಗ್ಗೆ ಮಾತನಾಡಿದರೆ, ಹೌದು ಹೌದು ಎಂದು ತಲೆ ಆಡಿಸುತ್ತಾರೆ. ಆದರೆ ನಾವು ನೀರಿನ ಉಳಿವಿಗಾಗಿ ಏನು ಮಾಡಬಹುದು ಎಂದರೆ ಉತ್ತರ ಹೊಳೆಯುವುದಿಲ್ಲ ಅಥವಾ ಮುಂದಿನ ಸಲ ನೀರು ಬಳಸುವಾಗ ಕನಿಷ್ಟ ನಲ್ಲಿಯ ನೀರನ್ನು ಸಣ್ಣದಾಗಿ ಬಿಡಬೇಕು ಎಂಬುವ ಸಂಕಲ್ಪವೂ ಇರುವುದಿಲ್ಲ.



ಅಬಿದ್ ಸುರತಿ ಹುಟ್ಟಿ ಬೆಳೆದದ್ದು ಮುಂಬೈನ ಕೆಳ ಮಧ್ಯಮ ವರ್ಗದ ಜನ ಇರುವ ಚಾಳ್ ನಲ್ಲಿ. ಅಲ್ಲಿನ ನೀರಿನ ಹೋರಾಟದ ಕಷ್ಟದ ಅರಿವು ಅವರಿಗೆ ಬಾಲ್ಯದಲ್ಲೇ ಅನುಭವಕ್ಕೆ ಬಂದಿತ್ತು. ನಂತರ ದೊಡ್ಡವರಾಗುವ ಹೊತ್ತಿಗೆ ನೀರು ಎಲ್ಲಾದರೂ ವ್ಯರ್ಥವಾಗಿ ಹೋಗುತ್ತಿದ್ದರೆ ಇವರಿಗೆ ಬಹಳ ಕಿರಿಕಿರಿಯಾಗುತ್ತಿತ್ತು. ಆ ಕಿರಿಕಿರಿ ಸೋರುವ ನಲ್ಲಿಗಳನ್ನು ನೋಡಿದರೂ ಆಗುತ್ತಿತ್ತು.

ಒಂದು ದಿನ ಮುಂಬೈನ ತಮ್ಮ ಗೆಳೆಯನ ಮನೆಯಲ್ಲಿ ಹರಟುತ್ತಾ ಕುಳಿತಿದ್ದರು. ಅವರ ಮನೆಯ ಅಡಿಗೆ ಮನೆಯಿಂದ ಸೋರುವ ನಲ್ಲಿಯ ಟಕ ಟಕ ಶಬ್ದ ಬರುತ್ತಿತ್ತು. ಕೂಡಲೆ ತಮ್ಮ ಗೆಳೆಯನಿಗೆ ಆ ನಲ್ಲಿಯನ್ನು ಸರಿಪಡಿಸಬಾರದೇ ಎಂದರು. ಆ ಗೆಳೆಯ ಸರಿ ಪಡಿಸುತ್ತೇನೆ ಎಂದರು. ಈ ಮಾತಿಗೆ ಆರು ತಿಂಗಳು ಕಳೆದಿತ್ತು. ಮತ್ತೆ ಆ ಗೆಳೆಯನ ಮನೆಗೆ ಹೋಗುವ ಪ್ರಸಂಗ ಬಂತು, ಅಲ್ಲಿ ಆ ನಲ್ಲಿ ಹಾಗೆಯೇ ಸೋರುತ್ತಿತ್ತು. ಪ್ರತಿ ಕ್ಷಣವೂ ಟಕ ಟಕ ಎಂದು ನೀರು ವ್ಯರ್ಥವಾಗಿ ಹೋಗುತ್ತಿದೆ. ನಲ್ಲಿ ರಿಪೇರಿ ಮಾಡಿಸದಿರುವ ಬಗ್ಗೆ ಸ್ವಲ್ಪ ಬೇಸರದಿಂದಲೇ ಗೆಳೆಯನಲ್ಲಿ ಆಕ್ಷೇಪ ಎತ್ತಿದರು. ಆಗ ಗೆಳೆಯ ತನ್ನ ಅಸಹಾಯಕತೆಯನ್ನು ಹೇಳಿದ. ಮುಂಬೈನಂತಹ ದೊಡ್ಡ ನಗರದಲ್ಲಿ ಒಂದು ಸಣ್ಣ ನಲ್ಲಿ ರಿಪೇರಿ ಮಾಡಿಸಲು ಇರುವ ಕಷ್ಟವನ್ನು ಆತ ವಿವರಿಸಿದ. ಆತನಿಗೆ ಹೇಗೆ ಉತ್ತರಿಸಬೇಕೋ ತಿಳಿಯದೆ ವಾಪಸ್ಸು ಮನೆಗೆ ಬಂದರು ಅಬಿದ್ ಸುರತಿ. ಒಂದು ಭಾನುವಾರ. ತಿಂಡಿ ತಿಂದು ಚಹ ಕುಡಿದು ಭಾನುವಾರದ ಪತ್ರಿಕೆಯನ್ನು ಓದುತ್ತಾ ಕುಳಿತಿದ್ದರು. ಅಲ್ಲೊಂದು ಲೇಖನ ನೀರಿನ್ನು ಉಳಿಸಬೇಕಾದ ಜರೂರಿನ ಬಗ್ಗೆ ಇತ್ತು. ಅದರಲ್ಲಿದ್ದ ಒಂದು ಅಂಕಿ ಅಂಶವು ಸೋರುವ ನಲ್ಲಿಯಿಂದ ಪ್ರತಿ ಸೆಕೆಂಡ್‌ಗೆ ಒಂದು ಹನಿ ನೀರು ಬಿದ್ದರೂ ಅದು ತಿಂಗಳಿಗೆ ಸಾವಿರ ಲೀಟರ್ ಆಗುತ್ತದೆ ಎಂದು ಇತ್ತು. ಈ ಅಂಕಿ ಅಂಶ ಅವರಲ್ಲಿ ಆತಂಕವನ್ನು ಉಂಟುಮಾಡಿತು. ಈ ನೀರನ್ನು ಉಳಿಸಲು ತಾನು ಏನಾದರೂ ಮಾಡಬೇಕು ಎಂದು ತೀವ್ರವಾಗಿ ಎನಿಸ ತೊಡಗಿತು. ಪ್ರತಿ ಭಾನುವಾರ ಮುಂಜಾನೆ ತಮ್ಮ ಅಕ್ಕ

ಪಕ್ಕದ ಅಪಾರ್ಟ ಮೆಂಟ್‌ಗಳಿಗೆ ಭೇಟಿ ನೀಡಿ ಸೋರುತ್ತಿರುವ ನಲ್ಲಿಗಳನ್ನು ಸರಿ ಪಡಿಸಬಾರದೇಕೆ ಎಂದು ಕೊಂಡರು. ಅಂದು ಕೊಂಡವರು ಮುಂದಿನ ವಾರವೇ ಕೆಲಸ ಪ್ರಾರಂಭಿಸಿದರು. ನಲ್ಲಿ ರಿಪೇರಿ ಮಾಡುವ ಒಬ್ಬ ಹುಡುಗನನ್ನು ಹಿಡಿದು ನಲ್ಲಿ ರಿಪೇರಿ ಮಾಡಲು ಬೇಕಾದ ಒಂದಿಷ್ಟು ಸಾಮಾನುಗಳನ್ನು ಹಿಡಿದು ಮನೆಯಿಂದ ಹೊರಟು ಸೋರುತ್ತಿರುವ ನಲ್ಲಿ ನಿಲ್ಲಿಸಲು ಮನೆಯ ಬಾಗಿಲುಗಳನ್ನು ತಟ್ಟ ತೊಡಗಿದರು. ಹೀಗೆ ಅವರ 'ಡಾಪ್ ಡೆಡ್' ಸ್ವಯಂಸೇವಾ ಸಂಸ್ಥೆ ಪ್ರಾರಂಭವಾಯಿತು. ಮೊದಲ ವರ್ಷ ೨೦೦೭ ರಲ್ಲಿ ಅವರು ಸುಮಾರು ೧೬೦೦ ಮನೆಗಳಿಗೆ ಭೇಟಿ ನೀಡಿ ೫೦೦೦ ನಲ್ಲಿಗಳನ್ನು ರಿಪೇರಿ ಮಾಡಿದರು. ಈವರಗೆ ತಾವು ಸೋರುವ ನಲ್ಲಿಗಳನ್ನು ನಿಲ್ಲಿಸಿ ಸುಮಾರು ೨೦ ಮಿಲಿಯನ್ ಲೀಟರ್ ನೀರು ಉಳಿಸಿದ್ದೇನೆ ಎಂದು ಹೆಮ್ಮೆ ಇಂದ ಅಬಿದ್ ಸುರತಿ ಹೇಳುತ್ತಾರೆ.

ಈ ಕೆಲಸ ಮಾಡಲು ಹಣ ಎಲ್ಲಿಂದ ಬರುತ್ತದೆ ಎಂದು ಕೇಳಿದ ಪ್ರಶ್ನೆಗೆ ಅವರು ನೀಡಿದ ಉತ್ತರ ಅನುಭವದಿಂದ ಬಂದದ್ದು 'ನೀವು ಸಾರ್ವಜನಿಕ ಕೆಲಸವನ್ನು ಮಾಡ ಬೇಕಾದರೆ ಸಂಪೂರ್ಣ ಮನಸ್ಸಿನಿಂದ ಮಾಡಿ ಮತ್ತು ಪಾರದರ್ಶಕವಾಗಿರಿ ಆಗ ದೇವರು ನಿಮ್ಮೊಂದಿಗೆ ಇರುತ್ತಾನೆ ಎಲ್ಲಿಂದಲೋ ನಿಮಗೆ ಬೇಕಾದಷ್ಟು ಸಹಾಯ ಒದಗಿ ಬರುತ್ತದೆ'

ಏನೂ ಮಾಡದೆ ಎಲ್ಲವೂ ಹಾಳಾಗುತ್ತಿದೆ, ನೀರು ಸೋರುತ್ತಿದೆ, ಮರಗಳು ಕಡಿಮೆ ಯಾಗುತ್ತಿದೆ, ಪ್ಲಾಸ್ಟಿಕ್ ಎಲ್ಲ ಕಡೆ ಸೇರುತ್ತಿದೆ, ವಿದ್ಯುತ್ ದಂಡ ಆಗುತ್ತಿದೆ, ಎಲ್ಲ ಕಡೆ ಕಸ ಬೀಳುತ್ತಿದೆ ಎಂದು ಕರಬುತ್ತ ಕೂರುವ ನಮ್ಮಂತಹವರಿಗೆ ಅಬಿದ್ ಸುರತಿಯವರ ಚಿಕ್ಕ ಕೆಲಸ ಪ್ರೇರಣೆ ನೀಡಲಿ. ●

ಜನಪದ ಸೇವಾ ಟ್ರಸ್ಟ್ : ಒಂದು ಪಯಣ

ಜನಪದ ಸೇವಾ ಟ್ರಸ್ಟಿನ ಬಗ್ಗೆ ಒಂದು ಸಾಕ್ಷ್ಯ ಚಿತ್ರವನ್ನು ತಯಾರಿಸುವ ಕನಸು ಬಹಳ ದಿನಗಳದ್ದಾಗಿತ್ತು. ಸುರೇಂದ್ರ ಕೌಲಗಿ ಮತ್ತು ಗಿರಿಜಾ ಕೌಲಗಿಯವರು ಇದ್ದಾಗಲೇ ನಿರ್ಮಾಣವಾಗ ಬೇಕಿದ್ದ ಸಾಕ್ಷ್ಯ ಚಿತ್ರವೊಂದು ಕಳೆದ ಕೆಲವು ತಿಂಗಳ ಪ್ರಯತ್ನದಿಂದ ತಯಾರಾಯಿತು. ಶ್ರೀ ಸುಮೇರು ರಾವತ್ ಅವರು ಛಾಯಾಗ್ರಹಣ ಮತ್ತು ಪರಿಕಲ್ಪನೆಯಲ್ಲಿ ಈ ಸಾಕ್ಷ್ಯ ಚಿತ್ರ ನಿರ್ಮಾಣವಾಗಿದೆ. ಸಾಕ್ಷ್ಯಚಿತ್ರಕ್ಕೆ 'ಜನಪದ ಸೇವಾ ಟ್ರಸ್ಟ್-ಒಂದು ಪಯಣ' ಎಂದು ಶೀರ್ಷಿಕೆ ಕೊಡಲಾಗಿದೆ. ಜನಪದ ಸೇವಾ ಟ್ರಸ್ಟಿನ ೫೮ ವರ್ಷಗಳ ದೀರ್ಘ ಪಯಣವನ್ನು ದಾಖಲಿಸವ ಪ್ರಯತ್ನ ಇದಾಗಿದೆ. ಮೂವತ್ತು ನಿಮಿಷಗಳ ಈ ಸಾಕ್ಷ್ಯ ಚಿತ್ರವನ್ನು ಏಪ್ರಿಲ್ ೮ ರಂದು ಮೈಸೂರಿನಲ್ಲಿ ಲೋಕಾರ್ಪಣೆ ಮಾಡಲಾಯಿತು. ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸುಗತ ಶ್ರೀನಿವಾಸರಾಜು, ಶ್ರೀಮತಿ ರಾಮೇಶ್ವರಿ ವರ್ಮಾ, ಶ್ರೀ ಕೆ.ವೆಂಕಟರಾಜು ಅವರಿದ್ದರು. ಅನಿರೀಕ್ಷಿತವಾಗಿ ಶ್ರೀಮತಿ ಭಾರ್ಗವಿ ನಾರಾಯಣ ಕೂಡ ಕಾರ್ಯಕ್ರಮಕ್ಕೆ ಆಗಮಿಸಿದರು. ಅಲ್ಲದೆ ಜನಪದ ಸೇವಾ ಟ್ರಸ್ಟಿನ ಹಲವಾರು ಹಿತೈಷಿಗಳು ಟ್ರಸ್ಟಿನ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಶ್ರೀಮತಿ ಭಾರ್ಗವಿ ನಾರಾಯಣ, ಶ್ರೀಮತಿ ರಾಮೇಶ್ವರಿ ವರ್ಮಾ, ಶ್ರೀ ಕೆ. ವೆಂಕಟರಾಜು, ಶ್ರೀ ಸುಗತ ಶ್ರೀನಿವಾಸರಾಜು ಮತ್ತು ಶ್ರೀ ಸುಮೇರು ರಾವತ್

ಈ ಸಾಕ್ಷ್ಯಚಿತ್ರವನ್ನು ಜನಪದ ಸೇವಾ ಟ್ರಸ್ಟಿನ ಜಾಲತಾಣ www.janapada.org ಯಲ್ಲಿ ವೀಕ್ಷಿಸಬಹುದಾಗಿದೆ. ●

ತಿಂಗಳ ಕವನಕ್ಕೊಂದು ಟಿಪ್ಪಣಿ

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ 'ಪ್ರಸ್ತುತ' ಎಂಬ ಕವಿತೆ ಅಕ್ಷರಶಃ ಒಂದು ವಿಷಾದಗೀತೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕುಸಿಯುತ್ತಿರುವ ನೈತಿಕ ಹಾಗೂ ಭಾವನಾತ್ಮಕ ಮಟ್ಟವನ್ನು ಧ್ಯಾನಿಸುತ್ತಾ ರಚಿಸಲಾದ ಈ ಕವಿತೆಯ ಉದ್ದಕ್ಕೂ ಕವಿಯ ಹತಾಶೆಯ ನಿಟ್ಟುಸಿ-ರಿನ ಶ್ರುತಿ ಮಿಡಿಯುತ್ತಿದೆ. ಸ್ವಾತಂತ್ರ್ಯ ಬರುವ ಮೊದಲು ಈ ದೇಶದಲ್ಲಿದ್ದ ಮೌಲ್ಯಪ್ರಜ್ಞೆ ಪ್ರಸ್ತುತ ಕಾಲಘಟ್ಟದಲ್ಲಿ ಸಂಪೂರ್ಣ ಮರೆಯಾಗುತ್ತಿರುವುದನ್ನು ಕವಿ ಸೂಕ್ಷ್ಮವಾಗಿ ಗಮನಿಸಿದ್ದಾರೆ. ಈ ಕವಿತೆಯ ಮೂಲಕ ಅವರು ಚರಿತ್ರಹೀನ ಸ್ವತಂತ್ರ ಭಾರತದ ಪತನಾಭಿಮುಖ ಪ್ರವೃತ್ತಿಯನ್ನು ಕುರಿತಾದ ತಮ್ಮ ವ್ಯಥೆಯನ್ನು ಹೊರಹಾಕಿದ್ದಾರೆ.

ಕವಿತೆ ಪ್ರಾರಂಭವಾಗುವುದೇ 'ಅಯ್ಯೊ ನನ್ನ ದೇಶವೇ, ಏನಾಗಿದೆ ನಿನಗೆ?' ಎಂಬ ವಿಷಾದದ ಉದ್ಗಾರದಿಂದ. ಅಂತರಂಗ, ಬಹಿರಂಗ – ಎರಡೂ ಮುಖಗಳಲ್ಲಿ ನಮ್ಮ ದೇಶ ಪತನದತ್ತಲೇ ಜಾರುತ್ತಿದೆ. ಒಂದು ಕಾಲದಲ್ಲಿ ಪ್ರಪಂಚಕ್ಕೇ ಬೆಳಕಾಗಿದ್ದ ದಿವ್ಯದೀಪ ಭಾರತದಲ್ಲಿ ಬೆಳಗುತ್ತಿತ್ತು. ಆದರೆ ಈಗ ಅದರ ಜಾಗದಲ್ಲಿ ಸೈತಾನನ ಉರಿಗಣ್ಣು ಜ್ವಲಿಸುತ್ತಿದೆ. 'ಸರ್ವೇ ಭವಂತು ಸುಖಿನಃ' ಎಂದು ಇಡೀ ಜೀವರಾಶಿಯ ನೆಮ್ಮದಿಯನ್ನೇ ಹಾರೈಸುತ್ತಿದ್ದ ಭಾರತೀಯರ ಹಾಲಿನಂಥ ಮನಸ್ಸುಗಳಲ್ಲಿ ಈಗ ಕ್ರೌರ್ಯ, ಹಿಂಸೆ, ದ್ವೇಷ ಮುಂತಾದ ಹಾಲಾಹಲ ಕಾಣಿಸಿಕೊಂಡಿದೆ. ಪರಿಸರಮಾಲಿನ್ಯದ ಜೊತೆಜೊತೆಗೇ ಭಾವಮಾಲಿನ್ಯವೂ ಸೇರಿಕೊಂಡು ದೇಶದ ವಾತಾವರಣ ದುರ್ವಾಸನೆ ಬೀರುವಂತಾಗಿದೆ. ಜೀವಜಲ ಒಣಗಿ ಬರಡಾಗುತ್ತಿರುವ ನಿಸರ್ಗದಂತೆಯೇ ಭಾರತದ ಹೃದಯ ನಿರ್ಜಲೀಕರಣಗೊಂಡು ರೂಕ್ಷಗೊಂಡಿದೆ. ಸ್ವೈರ ವೃತ್ತಿ, ಸ್ವೇಚ್ಛಾಪ್ರವೃತ್ತಿಗಳ 'ತೊಂಡುಗೂಳಿ'ಗಳು ಭಾರತದ ಭಾವಶ್ರೀಮಂತಿಕೆಯನ್ನು ಧ್ವಂಸ ಮಾಡುತ್ತಿವೆ. ಭ್ರಷ್ಟಾಚಾರವೆಂಬುದು ಇಡೀ ದೇಶವನ್ನೇ ಆಪೋಶನಗೈಯುತ್ತಿದೆ. ರಾಷ್ಟ್ರಪ್ರೇಮವಿದ್ದ ಜಾಗದಲ್ಲಿ ಸ್ವಾರ್ಥ ವಿಜೃಂಭಿಸುತ್ತಿದೆ. ಕರ್ನಾಟಕದಲ್ಲಿ ವಿಧಾನಸಭೆಗೆ ಚುನಾವಣೆಗಳು ಸಮೀಪಿಸುತ್ತಿರುವ ಈ ದಿನಗಳಲ್ಲಿ ಈ ಎಲ್ಲ ನೇತ್ಯಾತ್ಮಕ ಕ್ರಿಯೆಗಳೂ ವೇಗೋತ್ಕರ್ಷ ಪಡೆಯುತ್ತಿರುವುದನ್ನು ನಾವು ಗಮನಿಸಬಹುದು. ಹೀಗಾಗಿ ಪ್ರಜ್ಞಾವಂತ ಭಾರತೀಯರೆಲ್ಲರೂ ಕವಿ ಜಿ.ಎಸ್.ಎಸ್. ಅವರೊಂದಿಗೆ 'ಅಯ್ಯೊ ನನ್ನ ದೇಶವೇ, ಏನಾಗಿದೆ ನಿನಗೆ?' ಎಂದು ನಿಟ್ಟುಸಿರು ಬಿಡುವಂತಾಗಿದೆ.

ದಶಕಗಳ ಹಿಂದೆ ರಚಿತವಾದ ಈ ಕವಿತೆ ಭಾರತದ ಸಂದರ್ಭದಲ್ಲಿ ಇಂದಿಗೂ ಪ್ರಸ್ತುತವೆನ್ನಿಸುವುದು ಸಂತೋಷದ ಸಂಗತಿಯಲ್ಲ. ನಮ್ಮ ಮೌಲ್ಯಪ್ರಜ್ಞೆಯನ್ನು ಮರಳಿ ಗಳಿಸಿಕೊಳ್ಳಬೇಕೆಂಬ ತೀವ್ರ ತುಡಿತ ಹಾಗೂ ಆ ನಿಟ್ಟಿನಲ್ಲಿ ನಾವು ನಡೆಸಬೇಕಾದ ಪ್ರಾಮಾಣಿಕ ಪ್ರಯತ್ನ ಇವುಗಳಿಂದ ಮಾತ್ರ ನಾವು ಈ ಜಾರುದಾರಿಯ ನಡಿಗೆಯನ್ನು ನಿಯಂತ್ರಿಸಬಹುದು.

– ಎನ್. ಶ್ರೀನಿವಾಸ ಉಡುಪ



೧೦೦ ವರ್ಷದ ಹಿಂದೆ ಗಾಂಧಿ

ಮೇ ೧೯೧೮

೧೯೧೮ ಮೇ ಮಾಹೆಯ ಕಡೆಯ ವಾರ. ಬಾಪು ಮತ್ತು ನಾನು ಮಾಮೂಲಿನಂತೆ ಮೂರನೆಯ ದರ್ಜೆಯ ರೈಲು ಪ್ರಯಾಣದಲ್ಲಿದ್ದೇವೆ. ಬಿಹಾರದ ಪಟ್ನಾ ರೈಲು ನಿಲ್ದಾಣದಲ್ಲಿ ಮೇ ಮಾಹೆಯ ಧಗೆಯೋ ಧಗೆ. ಒಬ್ಬ ಅಪರಿಚಿತ ಬಾಪೂ ಬಳಿ ಬಂದು ತನ್ನ ಹೆಗಲ ಮೇಲಿದ್ದ ಬಟ್ಟೆಯಿಂದ ಬಾಪುಗೆ ಗಾಳಿ ಬೀಸುತ್ತಾ ನಿಂತ. ನಂತರ ರೈಲಿಗೆ ನಮ್ಮೊಂದಿಗೇ ಹತ್ತಿ ನಮ್ಮೊಂದಿಗೇ ಕುಳಿತ. ಅಲ್ಲೂ ಕೂಡ ಬಾಪೂಗೆ ಗಾಳಿ ಬೀಸುತ್ತಲೇ ಇದ್ದ. ಯಾವುದೋ ಸಮಯದಲ್ಲಿ ಬಾಪುಗೆ ಗಾಢವಾದ ನಿದ್ದೆ ಹತ್ತಿತು. ಆ ಅಪರಿಚಿತ ವ್ಯಕ್ತಿ ಪೊಲೀಸ್ ಇಲಾಖೆಯ ಅತ್ಯಂತ ಸಣ್ಣ ಹುದ್ದೆಯಲ್ಲಿ ಕೆಲಸ ಮಾಡುವ ಸಾಮಾನ್ಯ ಮನುಷ್ಯ. ಆ ವ್ಯಕ್ತಿ ಇಳಿಯ ಬೇಕಾದ ನಿಲ್ದಾಣ ಬಂದಿತು. ಬಾಪು ಗಾಢ ನಿದ್ದೆಯಲ್ಲಿದ್ದಾರೆ. ಆದರೆ ಬಾಪು ಕಾಲ ಕೆಳಗೆ ಆತನ ಹತ್ತಿಯ ಚದ್ದರ್ ಸಿಕ್ಕಿ ಹಾಕಿಕೊಂಡು ಬಿಟ್ಟಿದೆ. ನಿಲ್ದಾಣ ಬಂದೇ ಬಿಟ್ಟಿತು. ಅದನ್ನು ಎಳೆದು ಕೊಂಡರೆ ಬಾಪುಗೆ ಎಚ್ಚರವಾಗುತ್ತದೆಂದು, ಆತ ಅದನ್ನು ಅಲ್ಲೆ ಬಿಟ್ಟು ಇಳಿದು ಹೊರಟು ಹೋದ. ಬಾಪುಗೆ ಎಚ್ಚರವಾದಾಗ ನಡೆದ ಪ್ರಸಂಗವನ್ನು ಅವರಿಗೆ ಹೇಳಿದೆ. ಯಾವುದೇ ಪ್ರಚಾರ, ಪ್ರತಿಫಲಾಪೇಕ್ಷೆ ಇಲ್ಲದೆ ಸೇವೆ ಮಾಡುವವರು ಎಲ್ಲೆಲ್ಲಿ, ಹೇಗೆ-ಹೇಗೆ ಇರುತ್ತಾರೆ, ನೋಡು ಎಂದರು ಬಾಪು. ನಿರಪೇಕ್ಷಿತನಾಗಿ ನಾನು ಅಂತಹ ಒಂದೇ ಒಂದು ಸೇವೆ ಮಾಡಿದ್ದು ನನ್ನ ನೆನಪಿಗೆ ಬರಲಿಲ್ಲ.

ಬಾಪು ಮತ್ತು ನಾನು ಈ ಘಟನೆಯನ್ನು ಚರ್ಚೆ ಮಾಡುತ್ತಿದ್ದಾಗ ನಮ್ಮ ಪಕ್ಕದಲ್ಲಿ ಒಬ್ಬ ಮಾರ್ವಾಡಿ ಪ್ರಯಾಣಿಕ ಕುಳಿತಿದ್ದ. ನಾವು ಮಾತನಾಡುವುದನ್ನು ಕೇಳಿಸಿಕೊಳ್ಳುತ್ತಿದ್ದ. ಎಷ್ಟೋ ಹೊತ್ತಿನ ನಂತರ ಆತ ಇಳಿಯ ಬೇಕಾದ ಮೊಗಲ್‌ಸರಾಯ್ ನಿಲ್ದಾಣ ಬಂತು. ಇಳಿಯುವ ಗಡಿಬಿಡಿಯಲ್ಲೂ ಆತ, ಆ ಚದ್ದರ್ ಹೇಗಿದ್ದರೂ ತಾವು ಬಳಸುವುದಿಲ್ಲ ನನಗೆ ಕೊಡಿ ಅಂದ. ಬಾಪು ಮುಸಿ ನಗುತ್ತಾ ನೀವೇನೂ ಯೋಚಿಸ ಬೇಡಿ ಅದನ್ನು ಅದರ ಮಾಲೀಕರಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇನೆ. ನಿಮ್ಮ ನಿಲ್ದಾಣ ಬಂತು ನೋಡಿ ಎಂದರು.

(ಮಹದೇವ ದೇಸಾಯಿ ದಿನಚರಿ ಇಂದ)

ತಿಂಗಳ ಚಿತ್ರ



ಜನಪದ ಸೇವಾ ಟ್ರಸ್ಟ್ -ಒಂದು ಪಯಣ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಸುಗತರಾಜು, ರಾಮೇಶ್ವರಿ ವರ್ಮಾ ಮತ್ತು ಭಾರ್ಗವಿ ನಾರಾಯಣ್

Janapada Vichara *Kannada Monthly Digest*
Janapada Seva Trust, Melkote, Dist-Mandya-571431
Tel: 08236 299854 email: janapada@yahoo.com
web: www.janapada.org
Printed at Chandragiri Printers,
Mandya Mob: 9945651584, 9739743237

KA/SK/MND/470/2015-17
Regd No KAR/KAN/2000/3820

ಜನಪದ ವಿಚಾರ
ಚಂದಾ ವಿವರ
ವಾರ್ಷಿಕ ಚಂದಾ ; ರೂ **೨೦೦.೦೦**
ಕಳುಹಿಸಿದ ಬೇಕಾದ ವಿಳಾಸ :
ಜನಪದ ಸೇವಾ ಟ್ರಸ್ಟ್,
ಮೇಲುಕೋಟೆ ೫೭೧೪೩೧, ಮಂಡ್ಯ ಜಿಲ್ಲೆ.

ಬ್ಯಾಂಕ್ ಮೂಲಕ ಕಳುಹಿಸುವವರಿಗೆ :
ಬ್ಯಾಂಕ್: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೇಲುಕೋಟೆ ಶಾಖೆ.
ಉಳಿತಾಯ ಖಾತೆ ಸಂಖ್ಯೆ 54034091793
ಐ ಎಫ್ ಎಸ್ ಸಿ : SBIN0040042